ಮಾನ್ಯ ಅಧ್ಯಕ್ಷರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯ ಯೋಜನಾ ಪ್ರಾಧಿಕಾರ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ:06.01.2021ರಂದು ಪೂರ್ವಾಹ್ನ 11.00 ಘಂಟೆಗೆ ನಡೆದ ಪ್ರಾಧಿಕಾರದ 67ನೇ ಸಾಮಾನ್ಯ ಸಭೆಯ ನಡಾವಳಿ

ಕ್ರಮ ಸಂಖ್ಯೆ	ಹಾಜರಿದ್ದ ಸದಸ್ಯರು	
1	ಮಾನ್ಯ ಅಧ್ಯಕ್ಷರು, ಬಿಎಂಐಸಿಎಪಿಎ	ಅಧ್ಯಕ್ಷರು
2	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿಎಂಐಸಿಎಪಿಎ. ಬೆಂಗಳೂರು.	ಸದಸ್ಯ ಕಾರ್ಯದರ್ಶಿಗಳು
	ಸದಸ್ಯರ ಪರವಾಗಿ ಹಾಜರಿದ್ದ ಅಧಿಕಾರಿಗಳು	
3	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು	ಸದಸ್ಯರು
4	ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.	ಸದಸ್ಯರು
5	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕೆ.ಐ.ಎ.ಡಿ.ಬಿ. ಬೆಂಗಳೂರು	ಸದಸ್ಯರು
6	ರಾಮನಗರ ಮುನಿಸಿಪಲ್ ಕಮಿಷನರ್, ರಾಮನಗರ, ರಾಮನಗರ ಜಿಲ್ಲೆ	ಸದಸ್ಯರು
	ಹಾಜರಿದ್ದ ವಿಶೇಷ ಆಹ್ವಾನಿತರು	
7	ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಬೆಂಗಳೂರು.	
8	ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	
9	ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು.	
	ಗೈರು ಹಾಜರಾದ ಅಧಿಕಾರಿಗಳು	
10	ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು	ಸದಸ್ಯರು
11	ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಬೆಂಗಳೂರು	ಸದಸ್ಯರು
12	ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು.	ಸದಸ್ಯರು
13	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು	ಸದಸ್ಯರು
14	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ ಜಿಲ್ಲೆ, ರಾಮನಗರ	ಸದಸ್ಯರು
15	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮಂಡ್ಯ	ಸದಸ್ಯರು
16	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು	ಸದಸ್ಯರು
17	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಕೇಂದ್ರ ಕಛೇರಿ, ಬೆಂಗಳೂರು	ಸದಸ್ಯರು
	ಗೈರು ಹಾಜರಾದ ವಿಶೇಷ ಆಹ್ವಾನಿತರು	
18	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ	
19	ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.	

1) ದಿನಾಂಕ:04.11.2020ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವುದು.

*****

ದಿನಾಂಕ:04.11.2020ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಕುರಿತು.

ತೀರ್ಮಾನ:

ದಿನಾಂಕ:04.11.2020ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ನಡಾವಳಿಯನ್ನು ಓದಿ ದೃಢೀಕರಿಸಲಾಯಿತು.

2) ದಿನಾಂಕ: 04.11.2020ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮದ ಸಂಬಂಧ ಪಾಲನಾ ವರದಿ.

*****

ದಿನಾಂಕ:04.11.2020ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ಸಾಮಾನ್ಯ ಸಭೆಯ ನಡಾವಳಿಯಂತೆ ವಹಿಸಲಾದ ಕ್ರಮಗಳ ಕುರಿತು ಪಾಲನಾ ವರದಿಯನ್ನು ಈ ಕೆಳಕಂಡಂತೆ ಮಂಡಿಸಿದೆ.

ವಿಷಯ ಸಂಖ್ಯೆ	ವಿಷಯ	ತೆಗೆದುಕೊಂಡ ಕ್ರಮ
I	**ಆಡಳಿತ ಶಾಖೆ**	
2	ಬಿಎಂಐಸಿಎಪಿಎ ಯೋಜನಾ ಪ್ರಾಧಿಕಾರದ 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿ ಸಲ್ಲಿಸುವ ಬಗ್ಗೆ. (ಅನುಬಂಧ–2).	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ಬಿಎಂಐಸಿಎಪಿಎ ಯೋಜನಾ ಪ್ರಾಧಿಕಾರದ ವಿವಿಧ ಉಳಿತಾಯ ಖಾತೆಯಲ್ಲಿರುವ ಹಣವನ್ನು ನಿಶ್ಚಿತ ಠೇವಣಿಯಲ್ಲಿ ತೊಡಗಿಸುವ ಬಗ್ಗೆ.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
II	**ತಾಂತ್ರಿಕ ಶಾಖೆ**	
III	**ವಿನ್ಯಾಸ ಅನುಮೋದನೆ ಪ್ರಕರಣಗಳು**	
1	ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:10 ಮತ್ತು 12ರಲ್ಲಿನ 0ಎ–38ಗು ವಿಸ್ತೀರ್ಣದ ಜಮೀನಿನಲ್ಲಿ ಅನುಮೋದನೆ ನೀಡಿರುವ ವಸತಿ ವಿನ್ಯಾಸದಲ್ಲಿನ ಅಂತಿಮ ಹಂತದ ಶೇ.40ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿ ಶ್ರೀ ಸಂಪತ್ ರಾಜ್ ಮತ್ತು ಶ್ರೀ ಮದನ್ ರಾಜ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
2	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸ.ನಂ:23/1ರ 01ಎ–16½ಗು, 23/2ರ 01ಎ–07ಗು, 23/3ರ 01ಎ–06½ಗು, 24/1ರ 03ಎ–13ಗು, 24/2ರ 0ಎ–16ಗು, 24/3ರ 07ಎ–18½ಗು, 24/4ರ 11ಎ–07½ಗು, 178/1ರ 02ಎಕರೆ, 179/1ರ 01ಎಕರೆ, 179/2ರ 01ಎ–14ಗು, 179/3ರ 01ಎಕರೆ, 179/4ರ 01ಎಕರೆ, 180/1ರ 0ಎ–26ಗು, 180/2ರ 01ಎ–03ಗು, 180/3ರ 01ಎ–06ಗು, 182ರ 03ಎ–37ಗು, 183/1ರ 01ಎ–03ಗು, 183/2ರ 01ಎ–09ಗು, 183/3ರ 02ಎ–12ಗು, 184/1ರ 02ಎ–15ಗು, 184/2ರ 0ಎ–11ಗು 184/3ರ 02ಎ–12ಗು,	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗುತ್ತಿದೆ

	185ರ 04ಎ–20ಗು, 186ರ 03ಎ–31ಗು, 197/2ರ 0ಎ–32ಗು, 197/4ರ 0ಎ–33ಗು, ಮತ್ತು 197/5ರ 01ಎ–01ಗು ಒಟ್ಟು 59ಎ–30ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಕುರಿತು ಮೈಕೋ ಕಾರ್ಮಿಕರ ಬಳಗದ ವಸತಿ ಸಹಕಾರ ಸಂಘ ನಿ., ರವರು ಸಲ್ಲಿಸಿರುವ ಮನವಿ ಕುರಿತು.	
3	ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೆಸರೆ ಗ್ರಾಮದ ಸರ್ವೆ ಸಂಖ್ಯೆ: 153/1ರ 02ಎ–30ಗು, 154/1ರ 01ಎಕರೆ, 154/2ರ 02ಎ–34ಗು, 156/1ರ 0ಎ–38ಗು ಮತ್ತು ಸರ್ವೆ ಸಂಖ್ಯೆ:156/2ರ 04ಎಕರೆ ಒಟ್ಟು 11ಎ–22ಗು ವಿಸ್ತೀರ್ಣದ ಜಮೀನಿಗೆ ಅಂತಿಮ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ ಶ್ರೀ ದಿಲೀಪ್.ಬಿ.ಸಾಲಿಯಾನ್ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
IV	**ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಡಿಯಲ್ಲಿ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಪ್ರಕರಣಗಳು**	
1	ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಚನಮಡು ಗ್ರಾಮದ ಸರ್ವೆ ಸಂಖ್ಯೆ:5/1ರ 03ಎ–14ಗು (0ಎ–09ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ: 5/4ರ 0ಎ–39ಗು (0ಎ–01ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/5ರ 03ಎ–01ಗು (0ಎ–02ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:5/6ರ 01ಎ–8¾ಗು, ಸರ್ವೆ ಸಂಖ್ಯೆ:5/7ರ 01ಎ–18¾ಗು (0ಎ–10ಗು 'ಎ' ಖರಾಬು ಸೇರಿ), ಸರ್ವೆ ಸಂಖ್ಯೆ:7/2ರ 0ಎ–30ಗು ಮತ್ತು ಸರ್ವೆ ಸಂಖ್ಯೆ:7/3ರ 0ಎ–32ಗು (0ಎ–02ಗು 'ಎ' ಖರಾಬು ಸೇರಿ) ಒಟ್ಟು 11ಎ–23½ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ವೆಂಕಟರಮಣಪ್ಪ ಬಿನ್ ಲೇಟ್ ವೆಂಕಟಪ್ಪ, ಶ್ರೀಮತಿ ಲಕ್ಷ್ಮೀದೇವಿ ಕೋಂ ಲೇಟ್ ಸಂಜೀವಯ್ಯ, ಶ್ರೀ ಸಿದ್ದಪ್ಪ ಬಿನ್ ಲೇಟ್ ವೆಂಕಟಪ್ಪ, ಶ್ರೀ ಲೋಕೇಶಯ್ಯ ಬಿನ್ ಲೇಟ್ ವೆಂಕಟಪ್ಪ, ಶ್ರೀ ಲಕ್ಷ್ಮಣ ಬಿನ್ ಲೇಟ್ ನಾರಾಯಣಪ್ಪ ಮತ್ತು ಶ್ರೀ ಗೋವಿಂದಪ್ಪ.ಎನ್ ಬಿನ್ ಲೇಟ್ ನಾರಾಯಣಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
2	ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಬೈಲುಕೊನೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:24/2ರ 08ಎ–10ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಹೆಚ್.ಬಿ.ಸಿದ್ದಗಂಗಯ್ಯ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಕ್ರಮವಹಿಸಲಾಗಿದೆ
3	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕೊಡಿಯಾಲಕರೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 281/2ರ 01ಎ–36ಗು (0ಎ–16ಗು 'ಎ' ಖರಾಬು ಪ್ರದೇಶವನ್ನು ಒಳಗೊಂಡಂತೆ) ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಭೈರಪ್ಪ.ಆರ್ ಬಿನ್ ರಂಗಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
4	ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಮಂಚನಾಯಕನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 24/1ರ 01ಎ–17¼ಗು, 24/2ರ	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ

	01ಎ–17¼ಗು, 24/3ರ 01ಎ–17¼ಗು, 24/4ರ 0ಎ–19ಗು, 24/5ರ 0ಎ–30ಗು ಮತ್ತು ಸರ್ವೆ ಸಂಖ್ಯೆ:24/6ರ 0ಎ–38¼ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ವಿಮಲ್ ಜೈನ್ ಕಟಾರಿಯ, ಮೆ॥ ಭೈಯ್ಯ ಟೆಕ್ಸ್.ಟೈಲ್ಸ್ ಪ್ಲೈ.ಲಿ ಪ್ರತಿನಿಧಿಯಾದ ಡೈರೆಕ್ಟರ್ ಶ್ರೀ ಗೌರವ್ ಭೈಯ್ಯ ಮತ್ತು ಶ್ರೀ ಮುತ್ತಪ್ಪ ಇವರು ಸಲ್ಲಿಸಿರುವ ಮನವಿ ಕುರಿತು.	ಇಲಾಖೆಗೆ ಸಲ್ಲಿಸಲಾಗಿದೆ.
5	ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಕೆಮ್ಮಣ್ಣಪುರ ಗ್ರಾಮದ ಸರ್ವೆ ಸಂಖ್ಯೆ:80/1ರ 06ಎ–32ಗು, 80/3ರ 0ಎ–29ಗು ಒಟ್ಟು 07ಎ–21ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಡಿ.ಕೃಷ್ಣ ಬಿನ್ ಲೇಟ್ ಕೆ.ಎಂ.ದಾಸೇಗೌಡ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
6	ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಹಂಪಾಪುರ ಗ್ರಾಮದ ಸರ್ವೆ ಸಂಖ್ಯೆ: 104/5ರ 0ಎ–37ಗು, 104/6ರ 01ಎ–10ಗು ಒಟ್ಟು 02ಎ–07ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ ಎನ್.ರವಿಶಂಕರ್ ಬಿನ್ ನಾಗಪ್ಪ ಶೆಟ್ಟಿ ಇವರು ಸಲ್ಲಿಸಿರುವ ಮನವಿ ಕುರಿತು.	ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಸ್ತಾವನೆಯನ್ನು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸಲಾಗಿದೆ.
7	ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಎಳೇನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:47/1ರಲ್ಲಿ 09ಎ–13ಗು ಜಮೀನಿಗೆ ಪಡೆದಿರುವ ಭೂ ಉಪಯೋಗ ಬದಲಾವಣೆಯ ಆದೇಶ ರದ್ದುಪಡಿಸಲು ಶ್ರೀ ಜಿ.ಕಿರಣ್ ಕುಮಾರ್ ರವರು ದೂರು ಮನವಿ ಸಲ್ಲಿಸಿರುವ ಕುರಿತು.	ದಿನಾಂಕ:25.11.2020ರಂದು ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ

ತೀರ್ಮಾನ:

ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ನಿರ್ಣಯದಂತೆ ಕಛೇರಿಯಿಂದ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಲಾಯಿತು ಹಾಗೂ ಸ್ಥಿರೀಕರಿಸಲಾಯಿತು.

I ಆಡಳಿತ ಶಾಖೆ ಪ್ರಸ್ತಾವನೆಗಳು

1) ಬಿಎಂಐಸಿ ಯೋಜನಾ ಪ್ರಾಧಿಕಾರದ 2020ನೇ ನವೆಂಬರ್ ಮತ್ತು ಡಿಸೆಂಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಪರಿಶೀಲನೆ

*****

ಪ್ರಾಧಿಕಾರದ 2020ನೇ ನವೆಂಬರ್ ಮತ್ತು ಡಿಸೆಂಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ಮಾಹಿತಿಯನ್ನು (ಅನುಬಂಧ–1)ರಲ್ಲಿ ಇರಿಸಿ ಸಭೆಯ ಅವಗಾಹನೆಗೆ ಮತ್ತು ಅನುಮೋದನೆಗೆ ಮಂಡಿಸಿದೆ.

ತೀರ್ಮಾನ:–

ಪ್ರಾಧಿಕಾರದ 2020ನೇ ನವೆಂಬರ್ ಮತ್ತು ಡಿಸೆಂಬರ್ ಮಾಹೆಯ ಮಾಸಿಕ ಆದಾಯ ಮತ್ತು ಖರ್ಚುಗಳ ವಿವರಗಳನ್ನು (ಅನುಬಂಧ–1)ರನ್ವಯ ಸಭೆಯು ಪರಿಶೀಲಿಸಿ ಅಂಗೀಕರಿಸಿತು.

2) **ಪ್ರಾಧಿಕಾರದ ಅಧ್ಯಕ್ಷರಿಗೆ ಹೊಸ ಇನ್ನೋವಾ ವಾಹನವನ್ನು ಖರೀದಿಸುವ ಬಗ್ಗೆ.**

*****

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 129 ಮೈಅಪ್ರಾ 2020. ದಿನಾಂಕ: 27.11.2020ರಲ್ಲಿ ಶ್ರೀ ಎಂ.ಜಯದೇವ್ ಇವರನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4ಸಿ(3)(i) ರಡಿಯಲ್ಲಿ ಈ ಕಛೇರಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಈ ಸಂಬಂಧ ಅಧ್ಯಕ್ಷರಾದ ಶ್ರೀ ಎಂ.ಜಯದೇವ್ ರವರು ದಿ: 30.11.2020ರಂದು ಅಧ್ಯಕ್ಷರ ಅಧಿಕಾರವನ್ನು ವಹಿಸಿಕೊಂಡಿರುತ್ತಾರೆ.

ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರದ ಅಧ್ಯಕ್ಷರ ವಾಹನ ಸಂಖ್ಯೆ: KA 01 5747 ವಾಹನವು 08 ವರ್ಷ ಹಳೆಯದಾಗಿದ್ದು, ಸದರಿ ವಾಹನವನ್ನು ಪ್ರಾಧಿಕಾರದ ಅಧಿಕಾರಿಗಳು ಕಛೇರಿಯ ದೈನಂದಿನ ಕೆಲಸಗಳಿಗಾಗಿ ಉಪಯೋಗಿಸುತ್ತಿರುತ್ತಾರೆ. ಹಾಗಾಗಿ, ಪ್ರಾಧಿಕಾರದ ಅಧ್ಯಕ್ಷರ ಕಛೇರಿ ಕೆಲಸಕ್ಕಾಗಿ ವಾಹನದ ಅವಶ್ಯಕತೆ ಇರುವುದರಿಂದ ಹೊಸ ಇನ್ನೋವಾ ಕಾರನ್ನು ಖರೀದಿಸಲು ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಕೋರಿದ್ದು, ಸದರಿ ಪತ್ರದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಹೊಸ ಇನ್ನೋವಾ ಕಾರನ್ನು ಖರೀದಿಸಲು ಅನುಮತಿ ನೀಡಲಾಗಿದೆ ಎಂದು ತಿಳಿಸಿರುತ್ತಾರೆ. ಅದರಂತೆ, ಪ್ರಾಧಿಕಾರದ ಅಧ್ಯಕ್ಷರಿಗೆ ಕಛೇರಿ ಕೆಲಸಕ್ಕಾಗಿ ಒಂದು ಹೊಸ ಇನ್ನೋವಾ ಕಾರನ್ನು ಖರೀದಿಸುವ ಸಂಬಂಧ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸುವ ಕುರಿತು ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

<u>ತೀರ್ಮಾನ:–</u>

ವಿಷಯದ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಲ್ಲಿ ಹಾಲಿ ಇರುವ ಎರಡು ವಾಹನಗಳು ಹಳೆಯದಾಗಿದ್ದು, ಅಧ್ಯಕ್ಷರ ಉಪಯೋಗಕ್ಕೆ ಹೊಸ ವಾಹನದ ಅವಶ್ಯಕತೆ ಇರುವುದರಿಂದ ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷರ ಮನವಿ ಮೇರೆಗೆ ಹೊಸ ಇನ್ನೋವಾ ವಾಹನವನ್ನು ಖರೀದಿಸಲು ಅನುಮೋದನೆ ನೀಡಿರುವುದರಿಂದ ಮತ್ತು ಪ್ರಾಧಿಕಾರದ 2020–21ನೇ ಸಾಲಿನ ಆಯವ್ಯಯದಲ್ಲಿ ರೂ. 50.00 ಲಕ್ಷಗಳನ್ನು ವಾಹನದ ಉಪಯೋಗಕ್ಕಾಗಿ ಕಾಯ್ದಿರಿಸಿದ್ದು, ಹಣದ ಲಭ್ಯತೆ ಇರುವುದರಿಂದ, ಪ್ರಾಧಿಕಾರದ ಅಧ್ಯಕ್ಷರ ಕಛೇರಿ ಉಪಯೋಗಕ್ಕಾಗಿ ಒಂದು ಹೊಸ ಇನ್ನೋವಾ ವಾಹನವನ್ನು ಖರೀದಿಸಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ MA 1600 (CA No.2116-2128/ 2020) ಪ್ರಕರಣಕ್ಕೆ ಸಂಬಂಧಿಸಿದಂತೆ, ಪ್ರಾಧಿಕಾರದ ವಕೀಲರುಗಳಿಗೆ ಪಾವತಿಸಲಾದ ಶುಲ್ಕ ಸ್ಥಿರೀಕರಿಸುವ ಕುರಿತು.**

*****

ನ್ಯಾಯಾಲಯದಲ್ಲಿ ಬರುತ್ತಿರುವ ಬಿಎಂಐಸಿಎಪಿಎ V/s ನೈಸಲ್ ಮತ್ತು ಇತರರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಸರ್ವೋಚ್ಚ ನ್ಯಾಯಲಯದಲ್ಲಿ ಅರ್ಜಿ ಹಾಕಲಾಗಿದ್ದು, ಕೇಸ್ ನಂ. ಎಂ.ಎ.1600 ರ ಪ್ರಕರಣವು ದಿನಾಂಕ: 19.11.2020ರಂದು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬರುತ್ತಿದ್ದು, ಪ್ರಾಧಿಕಾರದ ಪರವಾಗಿ ವಾದ ಮಂಡಿಸಲು ಕೆಳಕಂಡ ವಕೀಲರನ್ನು ನೇಮಿಸಿಕೊಳ್ಳುವ ಬಗ್ಗೆ ಹಾಗೂ ಶುಲ್ಕವನ್ನು ಪಾವತಿಸಲು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಪ್ರಾಧಿಕಾರದ ಅಧ್ಯಕ್ಷರಾದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರ ಅನುಮೋದನೆ ಪಡೆದು ನೇಮಿಸಲಾಗಿರುತ್ತದೆ. ಈ ಕೆಳಕಂಡ ಶುಲ್ಕವನ್ನು ಸಹಾ ಪಾವತಿಸಲಾಗಿದೆ.

ಕ್ರಮ ಸಂಖ್ಯೆ	ನ್ಯಾಯಾಲಯದಲ್ಲಿ ಹಾಜರಾದ ದಿನಾಂಕ	ಶೈಲೇಶ್ ಮಡಿಯಾಳ್ ವಕೀಲರು	ಶ್ರೀಮತಿ ಅನಿತಾ ಶೆಣೈ ಹಿರಿಯ ವಕೀಲರು	ಶ್ರೀ ಸಿ.ಎ. ಸುಂದರಂ ಹಿರಿಯ ವಕೀಲರು
1	19.11.2020	Appearance Charges : 33.000/-	Appearance Charges : 75.000/-	–
2	26.11.2020	Appearance Charges : 33.000/-	Appearance Charges : 75,000/-	Appearance Charges : 7,50,000/- Clerkage charges 75,000/-
	Total	**66,000/-**	**1,50,000/-**	**8,25,000/-**

ಈಗಾಗಲೇ ವಕೀಲರು ಸಲ್ಲಿಸಲಾಗಿರುವ ಬಿಲ್ಲಿನ ಮೊತ್ತ ರೂ. 10,41,000/–ಗಳ ಶುಲ್ಕಗಳನ್ನು ಪಾವತಿಸಲಾಗಿರುತ್ತದೆ. ಪ್ರಾಧಿಕಾರದ 2020–21ನೇ ಸಾಲಿನ ಆಯವ್ಯಯದಲ್ಲಿ ಕಾನೂನು ವೆಚ್ಚಗಳಿಗಾಗಿ 50.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸುತ್ತಾ, ಪ್ರಾಧಿಕಾರದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ವಕೀಲರುಗಳಿಗೆ ಪಾವತಿಸಿರುವ ಶುಲ್ಕ ಮೊತ್ತಗಳಿಗೆ ಘಟನೋತ್ತರ ಮಂಜೂರಾತಿಗಾಗಿ ವಿಷಯವನ್ನು ಸಭೆಗೆ ಮಂಡಿಸಿದೆ.

ತೀರ್ಮಾನ:–

ವಿಷಯದ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದ MA 1600 (CA No.2116-2128/ 2020) ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಇವರ ಅನುಮೋದನೆ ಪಡೆದು ಪ್ರಾಧಿಕಾರದ ಪರವಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ವಾದ ಮಂಡಿಸಲು ನೇಮಿಸಿಕೊಂಡಿರುವ ವಕೀಲರುಗಳಿಗೆ ಪಾವತಿಸಲಾದ ಬಿಲ್‌ನ ಮೊತ್ತ ರೂ. 10,41,000/–ಗಳ ಬಗ್ಗೆ ಸಭೆಯು ಕೂಲಂಕುಷವಾಗಿ ಚರ್ಚಿಸಿ ಸೂಕ್ತವೆಂದು ಸ್ಥಿರೀಕರಿಸಲಾಯಿತು

4) **ಬೆಂಗಳೂರು –ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ ಕಛೇರಿಗೆ ಮಂಜೂರಾಗಿರುವ ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.**

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 149 ಎಂಐಬಿ 2000, ದಿನಾಂಕ:27.02.2002 ಮತ್ತು ನಅಇ 46 ನಯೋಸೇ 2013, ದಿನಾಂಕ: 19.02.2013ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ಸೃಜಿಸಲಾದ ತಾತ್ಕಾಲಿಕ ಹುದ್ದೆಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 477 ಮೈಅಪ್ರಾ 2017, ಬೆಂಗಳೂರು, ದಿನಾಂಕ:02.07.2018ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದಲ್ಲಿ ತಾತ್ಕಾಲಿಕವಾಗಿ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಸೃಜಿಸಲಾಗಿರುವ ಕೆಳಕಂಡ 08 ತಾಂತ್ರಿಕ ಹುದ್ದೆಗಳನ್ನು ಮತ್ತು 18 ವಿವಿಧ ವೃಂದದ ಹುದ್ದೆಗಳನ್ನು ಕ್ರಮವಾಗಿ ದಿನಾಂಕ:27.02.2018ರಿಂದ ಹಾಗೂ ದಿನಾಂಕ:19.02.2018 ರಿಂದ ಮುಂದಿನ ಎರಡು (02) ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿದೆ.

ಪಟ್ಟಿ–1 (ತಾಂತ್ರಿಕ ಹುದ್ದೆಗಳು)

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು	1
2	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	1
3	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	2
4	ಕಿರಿಯ ನಗರಯೋಜಕರು	2
5	ಡ್ರಾಫ್ಟ್‌ಮೆನ್	2
	ಒಟ್ಟು	**08**

ಪಟ್ಟಿ–2 (ವಿವಿಧ ವೃಂದದ ಹುದ್ದೆಗಳು)

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ
1	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು	1
2	ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು	1
3	ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು	2
4	ನಗರ ಯೋಜಕರು	4
5	ಸಹಾಯಕ ನಗರ ಯೋಜಕರು	4
6	ಪ್ರಥಮ ದರ್ಜೆ ಸಹಾಯಕರು	1
7	ಶೀಘ್ರಲಿಪಿಗಾರರು	1
8	ಬೆರಳಚ್ಚುಗಾರರು	1
9	ಗ್ರೂಪ್–ಡಿ ನೌಕರರು	3
	ಒಟ್ಟು	**18**

ಸರ್ಕಾರದ ಆದೇಶ ಸಂಖ್ಯೆ: ನಅಇ 427 ಮೈಅಪ್ರಾ 2016, ಬೆಂಗಳೂರು, ದಿನಾಂಕ:25.06.2019ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿರುವ ತಲಾ ಒಂದು ಪ್ರಥಮ ದರ್ಜೆ ಸಹಾಯಕರು ಹಾಗೂ ಲೆಕ್ಕಾಧೀಕ್ಷಕರ ಹುದ್ದೆಗಳ ಸೇವೆಯನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 427 ಮೈಅಪ್ರಾ 2016, ದಿನಾಂಕ:02.02.2018ರಂದು ಹೊರಡಿಸಿರುವ ಆದೇಶದಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ದಿನಾಂಕ:02.02.2019 ರಿಂದ ಜಾರಿಗೆ ಬರುವಂತೆ ಒಂದು ವರ್ಷದ ಅವಧಿಗೆ ಮುಂದುವರೆಸಿ ಆದೇಶಿಸಲಾಗಿದೆ.

ಪ್ರಸ್ತುತ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಯನ್ನು ಪರಿಷ್ಕರಿಸಬೇಕಾಗಿರುವುದರಿಂದ ಹಾಗೂ ಪ್ರಾಧಿಕಾರದ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಹೆಚ್ಚಿನ ಅಧಿಕಾರಿ/ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಹಾಗಾಗಿ, ಈ ಮೇಲ್ಕಂಡ ಎಲ್ಲಾ ತಾತ್ಕಾಲಿಕ ಹುದ್ದೆಗಳು ಪ್ರಾಧಿಕಾರದ ಕೆಲಸಗಳಿಗೆ ಅನಿವಾರ್ಯವಾಗಿರುವುದರಿಂದ, ಸದರಿ ಹುದ್ದೆಗಳನ್ನು ಮುಂದಿನ 02 ವರ್ಷದ ಅವಧಿಗೆ ಮುಂದುವರೆಸುವ ಸಂಬಂಧ ವಿಷಯವನ್ನು ದಿನಾಂಕ: 04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿತ್ತು. ಸಭೆಯು "*ಪ್ರಸ್ತುತ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿರುವ ಎಲ್ಲಾ ಹುದ್ದೆಗಳನ್ನು ಮುಂದಿನ 02 ವರ್ಷದ ಅವಧಿಗೆ ಮುಂದುವರೆಸಬಹುದೆಂದು, ಇದರಿಂದ ಪ್ರಾಧಿಕಾರಕ್ಕೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲವೆಂದು ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಆದರೆ, ಸಭೆಯಲ್ಲಿ ಹಾಜರಿದ್ದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಮಾತನಾಡಿ, ಸದರಿಯವರು ಈ ಹಿಂದೆ ಪ್ರಾಧಿಕಾರದಲ್ಲಿ ಸದಸ್ಯ–ಕಾರ್ಯದರ್ಶಿಗಳಾಗಿ*

ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ:04.11.2019ರಂದು ಪ್ರಸ್ತುತ ಪ್ರಾಧಿಕಾರಕ್ಕೆ ಸರ್ಕಾರದಿಂದ ಸೃಜನೆಯಾಗಿರುವ ತಾತ್ಕಾಲಿಕ ಹುದ್ದೆಗಳ ಪೈಕಿ 01 ಸಹಾಯಕ ನಿರ್ದೇಶಕರು ಹಾಗೂ 04 ಸಹಾಯಕ ನಗರ ಯೋಜಕರ ಹುದ್ದೆಗಳನ್ನು ರದ್ದುಪಡಿಸಿ ಪ್ರಸ್ತುತ 18 ಹುದ್ದೆಗಳ ಪೈಕಿ 13 ಹುದ್ದೆಗಳನ್ನು ಖಾಯಂಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ಸಭೆಗೆ ತಿಳಿಸಿದರು. ಅದರಂತೆ, ಸಭೆಯಲ್ಲಿ ವಿಷಯವನ್ನು ಚರ್ಚಿಸಿ ಈಗಾಗಲೇ ರದ್ದುಪಡಿಸಲು ಕೋರಿರುವ 01 ಸಹಾಯಕ ನಿರ್ದೇಶಕರು ಹಾಗೂ 04 ಸಹಾಯಕ ನಗರ ಯೋಜಕರ ಹುದ್ದೆಗಳನ್ನು ಹೊರತುಪಡಿಸಿ ಉಳಿದ 13 ಹುದ್ದೆಗಳನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ 427 ಮೈಅಪ್ರಾ 2016, ಬೆಂಗಳೂರು ದಿನಾಂಕ:25.06.2019ರಲ್ಲಿ ಸರ್ಕಾರದಿಂದ ಮಂಜೂರಾಗಿರುವ 01 ಪ್ರಥಮ ದರ್ಜೆ ಸಹಾಯಕರು ಮತ್ತು ಲೆಕ್ಕಾಧೀಕ್ಷಕರ ಹುದ್ದೆಗಳನ್ನು ಸಹ ಮುಂದಿನ 02 ವರ್ಷದ ಅವಧಿಗೆ ಮುಂದುವರೆಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ."

ಆದರೆ, ಸಭೆಯ ತೀರ್ಮಾನದಲ್ಲಿ ಪಟ್ಟಿ–1ರಲ್ಲಿ ವಿವರಿಸಿರುವ 08 ಹುದ್ದೆಗಳನ್ನು ಮುಂದುವರೆಸುವ ಬಗ್ಗೆ ಬಿಟ್ಟುಹೋಗಿರುತ್ತದೆ. ಆದ್ದರಿಂದ ಪಟ್ಟಿ–1ರಲ್ಲಿ ವಿವರಿಸಿರುವ 08 ಹುದ್ದೆಗಳು ಪ್ರಾಧಿಕಾರದ ದಿನನಿತ್ಯದ ಕೆಲಸಗಳನ್ನು ನಿರ್ವಹಿಸಲು ಅತ್ಯವಶ್ಯಕವಾಗಿರುವುದರಿಂದ ಸದರಿ ಹುದ್ದೆಗಳನ್ನು ಸಹ ಮುಂದುವರೆಸುವ ಬಗ್ಗೆ ಸಭೆಯ ಚರ್ಚೆ ಹಾಗೂ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:–

ವಿಷಯದ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ದಿನಾಂಕ: 04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯಲ್ಲಿ ಪಟ್ಟಿ–1ರಲ್ಲಿ 08, ಪಟ್ಟಿ–2ರಲ್ಲಿ 18 ಹಾಗೂ 01 ಪ್ರಥಮ ದರ್ಜೆ ಸಹಾಯಕರು, ಲೆಕ್ಕಾಧಿಕ್ಷಕರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ ಪ್ರಾಧಿಕರದ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾಗಿತ್ತು. ಅದರೆ ಸಭೆಯ ತೀರ್ಮಾನದಲ್ಲಿ ಪಟ್ಟಿ–01ರಲ್ಲಿನ 08 ಹುದ್ದೆಗಳು ಬಿಟ್ಟುಹೋಗಿದ್ದರಿಂದ ಹಾಗೂ ಸದರಿ ಹುದ್ದೆಗಳು ಪ್ರಾಧಿಕಾರದ ದಿನ ನಿತ್ಯದ ಕೆಲಸಗಳಿಗೆ ಅತ್ಯವಶ್ಯಕವಾಗಿರುವುದರಿಂದ, ಪಟ್ಟಿ–1ರಲ್ಲಿನ 08 ಹುದ್ದೆಗಳನ್ನು ಸಹ ಮುಂದುವರೆಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

II ತಾಂತ್ರಿಕ ಶಾಖೆ ಪ್ರಸ್ತಾವನೆಗಳು

1) ಬಿಎಂಐಸಿಎ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ವಸತಿ ಕಟ್ಟಡ ಕಟ್ಟಲು ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯ ನೀಡಿರುವುದನ್ನು ದೃಢೀಕರಿಸುವ ಬಗ್ಗೆ.

*****

ಬಿಎಂಐಸಿಎ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ವಸತಿ ಕಟ್ಟಡ ಕಟ್ಟಲು ನೀಡಲಾದ ಪ್ರಾರಂಭಿಕ ಪ್ರಮಾಣ ಪತ್ರ/ ತಾಂತ್ರಿಕ ಅಭಿಪ್ರಾಯದ ವಿವರಗಳನ್ನು ಪ್ರಾಧಿಕಾರದ ಸಭೆಯ ಅವಗಾಹನೆಗಾಗಿ ತರಲು ಸದಸ್ಯ ಕಾರ್ಯದರ್ಶಿಗಳಿಗೆ ಸೂಚಿಸಲಾಗಿದೆ. ಅದರಂತೆ, ದಿನಾಂಕ:16.10.2020 ರಿಂದ ದಿನಾಂಕ:31.12.2020 ರವರೆಗೂ ಒಟ್ಟು 17 ಪ್ರಾರಂಭಿಕ ಪ್ರಮಾಣ ಪತ್ರ / ತಾಂತ್ರಿಕ ಅಭಿಪ್ರಾಯವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗೆ ನೀಡಿರುವ ವಿವರಗಳನ್ನು ಅನುಬಂಧ–2ರಲ್ಲಿ ಲಗತ್ತಿಸಿದ್ದು, ಸದರಿ ವಿಷಯವನ್ನು ಸಭೆಯ ಅವಗಾಹನೆಗೆ ಸಲ್ಲಿಸಲಾಗಿದೆ.

ತೀರ್ಮಾನ

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ದಿನಾಂಕ:16.10.2020 ರಿಂದ ದಿನಾಂಕ:31.12.2020*ರವರೆಗೂ ಕಟ್ಟಡ ಪರವಾನಗಿ ಸಂಬಂಧ (17)ಪ್ರಕರಣಗಳಿಗೆ ನೀಡಿರುವ ಪ್ರಾರಂಭಿಕ ಪ್ರಮಾಣ ಪತ್ರಗಳನ್ನು ಸಭೆಯು ಸ್ಥಿರೀಕರಿಸಿತು.*

III ವಿನ್ಯಾಸ ಅನುಮೋದನೆ ಪ್ರಕರಣಗಳು

1) **ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೆ॥ ಗೋಕುಲ್ ಡೆವಲಪರ್ಸ್ ಇವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಅರ್ಜಿದಾರರು ಕ್ರಯಕ್ಕೆ ಪಡೆದಿರುವ ಪ್ರಸ್ತಾಪಿತ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ: 29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗೂರು ಗ್ರಾಮದ ಸರ್ವೆ ಸಂಖ್ಯೆ: 132ರ 01ಎ–09ಗು ಒಟ್ಟು 09ಎ–06ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ಭಾಗಶಃ ವಸತಿ, ಭಾಗಶಃ ವಾಣಿಜ್ಯ ಮತ್ತು ಭಾಗಶಃ ರಸ್ತೆ (ಸಾರಿಗೆ ಮತ್ತು ಸಂಪರ್ಕ ವಲಯ) ವಲಯಗಳಲ್ಲಿ ಕಾಯ್ದಿರಿಸಲಾಗಿದೆ.

ಮುಂದುವರೆದು, ಅರ್ಜಿದಾರರು ಈ ಹಿಂದೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ಒಟ್ಟು 09ಎ–06ಗು ಜಮೀನಿಗೆ ಏಕನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸಲ್ಲಿಸಿದ್ದ ಪ್ರಸ್ತಾವನೆಗೆ ಸಂಬಂಧಿಸಿದಂತೆ ದಿನಾಂಕ: 01.02.2019ರಂದು ಜರುಗಿದ ಪ್ರಾಧಿಕಾರದ 62ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ: 68(14) ರಲ್ಲಿ ಮಂಡಿಸಲಾಗಿ ಸಭೆಯು ಅರ್ಜಿದಾರರಿಗೆ ವಲಯ ನಿಯಮಾವಳಿಗಳಂತೆ ಬಹು ನಿವೇಶನ ವಸತಿ ವಿನ್ಯಾಸ ನಕ್ಷೆ ಪ್ರಸ್ತಾವನೆ ಸಲ್ಲಿಸುವಂತೆ ಹಿಂಬರಹ ನೀಡಲು ತೀರ್ಮಾನಿಸಿರುತ್ತದೆ. ಅದರಂತೆ ಪ್ರಾಧಿಕಾರದಿಂದ ದಿನಾಂಕ: 11.03.2019ರಂದು ಹಿಂಬರಹ ನೀಡಲಾಗಿರುತ್ತದೆ. ಅದರಂತೆ ಅರ್ಜಿದಾರರು ದಿನಾಂಕ: 03.09.2020ರಂದು ಮನವಿ ಸಲ್ಲಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುತ್ತಾರೆ. ಈ ಸಂಬಂಧ ದಿನಾಂಕ:07.09.2020ರಂದು ನಡೆದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ **III**(9)ರಲ್ಲಿ ವಿಷಯವನ್ನು ಮಂಡಿಸಲಾಗಿ, ಪ್ರಸ್ತಾವನೆ ಸಂಬಂಧ ಕೋರಿದ್ದ *09ಎ–06ಗು ವಿಸ್ತೀರ್ಣದ ಪೈಕಿ ಮಹಾಯೋಜನೆಯಂತೆ ವಾಣಿಜ್ಯ ವಲಯದಲ್ಲಿ ಬರುವ ಜಮೀನುಗಳ ವಿಸ್ತೀರ್ಣವನ್ನು ಕರ್ನಾಟಕ ನಗರ ಮತ್ತು*

ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರಂತೆ ವಾಣಿಜ್ಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಬಗ್ಗೆ ಸೂಕ್ತ ಆದೇಶವನ್ನು ಸರ್ಕಾರದಿಂದ ಪಡೆಯಬೇಕಾಗಿರುತ್ತದೆ. ನಂತರ, ಸಭೆಯ ತೀರ್ಮಾನದಂತೆ ಪ್ರಾಧಿಕಾರದ ವಲಯ ನಿಯಮಾವಳಿ 4.03 Sub division Regulation ಪ್ರಕಾರ ಬಹುನಿವೇಶನ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪ್ರಸ್ತಾವನೆ ಸಲ್ಲಿಸಲು ಅರ್ಜಿದಾರರಿಗೆ ತಿಳಿಸಿರುವ ಅಂಶವನ್ನು ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅವಗಾಹನೆಗೆ ಸಲ್ಲಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ, ಸರ್ಕಾರದಿಂದ ಸೂಕ್ತ ಮಾರ್ಗದರ್ಶನ ಬಂದ ನಂತರ, ಪ್ರಸ್ತಾವನೆಯನ್ನು ಪರಿಶೀಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ. ಅದರಂತೆ, ದಿನಾಂಕ: 05.10.2020ರಂದು ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ.

ಮುಂದುವರೆದು, ದಿನಾಂಕ:04.11.2020 ರಂದು ನಡೆದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:**V**(1)ರಲ್ಲಿ ಮಹಾಯೋಜನೆಯ ವಲಯ ನಿಯಮಾವಳಿಯಂತೆ ವಾಣಿಜ್ಯ ವಲಯದಲ್ಲಿ ವಸತಿ ಉಪಯೋಗಕ್ಕೆ ಅನುಮತಿಸುವ ವಿಷಯಕ್ಕೆ ಕುರಿತು ಪ್ರಾಧಿಕಾರದ ಸಭೆಗೆ ಮಂಡಿಸಲಾಗಿ, ಸಭೆಯು ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ. *"ಪ್ರಸ್ತುತ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ಕ್ಕೆ ತಿದ್ದುಪಡಿ ತಂದು ಕಲಂ 14ಎ(3) ಯನ್ನು ಹಿಂಪಡೆಯಲಾಗಿದ್ದು, ಅದರಂತೆ ಮಹಾಯೋಜನೆಯಲ್ಲಿ ಕೈಗಾರಿಕಾ ವಲಯದಲ್ಲಿ ಬರುವ ಜಮೀನುಗಳನ್ನು ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕೆ ಅನುಮತಿಸಬಾರದೆಂದು ಸರ್ಕಾರದ ಪತ್ರ ಸಂಖ್ಯೆ: ನಅಇ 09 ಬೆಮಪ್ರಾ 2017, ದಿನಾಂಕ:27.09.2018ರಲ್ಲಿ ತಿಳಿಸಲಾಗಿದೆ ಹಾಗೂ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಮಹಾಯೋಜನೆಯ ವಲಯ ನಿಯಮಾವಳಿಯಂತೆ ವಾಣಿಜ್ಯ ವಲಯದಲ್ಲಿ ವಸತಿಗೆ ಅನುಮತಿಸಲು ಅವಕಾಶ ನೀಡಲಾಗಿದೆ ಎಂದು ಸದಸ್ಯ–ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಸದರಿ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ವಾಣಿಜ್ಯ ವಲಯದಲ್ಲಿ ವಸತಿ ಉದ್ದೇಶಕ್ಕೆ ಅನುಮತಿಸುವ ಬಗ್ಗೆ ಸರ್ಕಾರದಿಂದ ಸೂಕ್ತ ಮಾರ್ಗದರ್ಶನವನ್ನು ನೀಡುವವರೆಗೆ ಮಹಾಯೋಜನೆಯ ವಲಯ ನಿಯಮಾವಳಿಯಂತೆ ಪ್ರಾಧಿಕಾರದಲ್ಲಿ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು". ಅದರಂತೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿರುವ ಜಮೀನುಗಳ ಪೈಕಿ ವಾಣಿಜ್ಯ ವಲಯದಲ್ಲಿ ಬರುವ ಜಮೀನುಗಳಲ್ಲಿ ವಸತಿ ಅಭಿವೃದ್ಧಿಗಳನ್ನು ಅನುಮತಿಸಲು ಅವಕಾಶವಿರುತ್ತದೆ.*

ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಆದೇಶ ಸಂಖ್ಯೆ:ಎಲ್‌ಎನ್‌ಡಿ (ಎಸ್)ಸಿಆರ್/ 67/19–20, ದಿನಾಂಕ:05.03.2020ರಲ್ಲಿ ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:31/1ರ 0ಎ–01ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 0ಎ–02ಗು ಒಟ್ಟು 0ಎ–03ಗು ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 71ರಂತೆ ಕಾಯ್ದಿರಿಸಿರುವ ಕಾಲುದಾರಿಯ 'ಬಿ' ಖರಾಬು ಜಮೀನನ್ನು ಕೆಲವೊಂದು ಷರತ್ತುಗಳಿಗೊಳಪಡಿಸಿ ಪಥ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಬಿಡಿಸ್.ಎಎಲ್‌ಎನ್: ಎಸ್‌ಆರ್(ಎಸ್):278/2002–03, ದಿನಾಂಕ:21.01.2003ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರಲ್ಲಿ 0ಎ–32ಗು ಮತ್ತು ಸರ್ವೆ ಸಂಖ್ಯೆ:31/1ರ 03ಎ–35ಗು ಒಟ್ಟು 04ಎ–27ಗು, ಸಂಖ್ಯೆ:ಬಿಡಿಸ್.ಎಎಲ್‌ಎನ್:ಎಸ್‌ಆರ್(ಎಸ್):279/2002–03, ದಿನಾಂಕ: 07.01.2003ರಲ್ಲಿ ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:31/2ರಲ್ಲಿ 03ಎ–10ಗು ಮತ್ತು ಪತ್ರ ಸಂಖ್ಯೆ: ಬಿಡಿಸ್.ಎಎಲ್‌ಎನ್:ಎಸ್‌ಆರ್(ಎಸ್):280/2002–03, ದಿನಾಂಕ:21.01.2003ರಲ್ಲಿ ದೊಡ್ಡತೋಗೂರು ಗ್ರಾಮದ ಸರ್ವೆ ಸಂಖ್ಯೆ:132ರಲ್ಲಿ 01ಎ–09ಗು ವ್ಯವಸಾಯದ ಜಮೀನುಗಳನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಲಾಗಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆಐಎಡಿಬಿ ರವರ ಪತ್ರ ಸಂಖ್ಯೆ: ಬೆಂಗಳೂರು/ವಿಭೂಸ್ವಾಅ–2/1624/ 2020–21, ದಿನಾಂಕ:08.09.2020ರಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ಒಟ್ಟು 09ಎ–06ಗು ವಿಸ್ತೀರ್ಣದ ಜಮೀನು ಈ ಕಛೇರಿ ವತಿಯಿಂದ ಭೂಸ್ವಾಧೀನವಾಗಿರುವುದು ಕಂಡುಬಂದಿರುವುದಿಲ್ಲ ಮತ್ತು ಬೇರೆ ಇಲಾಖೆ/ವಲಯ ಕಛೇರಿಯಿಂದ ಭೂಸ್ವಾಧೀನವಾಗಿದ್ದಲ್ಲಿ ಆಯಾ ಇಲಾಖೆಗಳಿಂದ ಹಿಂಬರಹ ಪಡೆಯಬಹುದಾಗಿದೆ ಎಂದು ತಿಳಿಸಿರುತ್ತಾರೆ. ವಿಶೇಷ ಭೂಸ್ವಾಧೀನಾಧಿಕಾರಿಗಳು–1, ಕೆಐಎಡಿಬಿ(ಬಿಎಂಐಸಿಪಿ) ರವರ ಪತ್ರ ಸಂಖ್ಯೆ: ಬಿಎಂಐಸಿಪಿ/ ಎಲ್ಎಕ್ಯೂ/ ಎಸ್ಆರ್–34(54)/ 2020–03/ 34/ 2020–21, ದಿನಾಂಕ: 14.09.2020ರಲ್ಲಿ ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಗೆ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೊಡ್ಡತೋಗೂರು ಗ್ರಾಮದ ಸರ್ವೆ ಸಂಖ್ಯೆ:132ರಲ್ಲಿ 01ಎ–09ಗು ಹಾಗೂ ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29ರಲ್ಲಿ 21ಎ–22ಗು, ಸರ್ವೆ ಸಯಖ್ಯೆ:31ರಲ್ಲಿ 08ಎ–22ಗು ಜಮೀನುಗಳಿಗೆ ಕೆ.ಐ.ಎ.ಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. ದೊಡ್ಡತೋಗೂರು ಗ್ರಾಮದ ಸರ್ವೆ ಸಂಖ್ಯೆ: 132 ಹಾಗೂ ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5, 31/1, 31/2ರ ಜಮೀನುಗಳಿಗೆ ಈ ತಹಲ್ವರೆವಿಗೂ ಕೆಐಎಡಿ ಕಾಯ್ದೆ ಕಲಂ 28(4)ರಂತೆ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ಸದರಿ ಸರ್ವೆ ನಂಬರ್ ಜಮೀನುಗಳ ಪ್ರಾಥಮಿಕ ಅಧಿಸೂಚನೆಯನ್ನು ರದ್ದುಪಡಿಸಿ ಆದೇಶಿಸಿರುವ ಪ್ರತಿಗಳನ್ನು ಹಾಗೂ ಅವರ ಕಛೇರಿಯ ಪತ್ರ ದಿನಾಂಕ:04.10.2018ರ ಪತ್ರದ ಪ್ರತಿಯನ್ನು ಲಗತ್ತಿಸಿ ಸಲ್ಲಿಸಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೇಗೂರು ಉಪ ವಿಭಾಗ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಪತ್ರ ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಬೇಉವಿ/ಪಿ.ಆರ್/111/2020–21, ದಿನಾಂಕ:11.09.2020ರಲ್ಲಿ ಪ್ರಸ್ತಾಪಿತ ಜಮೀನಿನಲ್ಲಿ ವಸತಿ ಉದ್ದೇಶಕ್ಕೆ ಬಡಾವಣೆ ನಕ್ಷೆಯನ್ನು ಅನುಮೋದನೆ ಪಡೆದು, ಅಭಿವೃದ್ಧಿಪಡಿಸಿದರೆ ಪಾಲಿಕೆಗೆ ಮತ್ತು ಇತರೆ ಸಂಬಂಧಪಟ್ಟ ಇಲಾಖೆಗಳಿಗೆ ನಿಯಮಾನುಸಾರ ಶುಲ್ಕಗಳನ್ನು ಪಾವತಿಸಿ ನಂತರ ಪ್ರಸ್ತಾಪಿತ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು ಎಂದು ನಿರಾಕ್ಷೇಪಣಾ ಪತ್ರದಲ್ಲಿ ತಿಳಿಸಿರುತ್ತಾರೆ. ಮುಖ್ಯ ಅಭಿಯಂತರರು (ವಿದ್ಯುತ್), BMAZ(South), ಬೆಸ್ಕಾಂ ರವರ ಪತ್ರ ಸಂಖ್ಯೆ: CEE/BMASZ/SEE(O)/AEE-1/1F-148/ 20-21/3847-50, ದಿನಾಂಕ:18.12.2020 ರಲ್ಲಿ ಪ್ರಸ್ತಾಪಿತ ಜಮೀನಿಗೆ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗುರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ಜಮೀನಿಗೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಮತ್ತು ಭೂ ಮಾಪಕರು, ಬೆಂಗಳೂರು ದಕ್ಷಿಣ ತಾಲ್ಲೂಕು ಇವರುಗಳು ಅಳತೆಗಳನ್ನು ನಮೂದಿಸಿ ತಯಾರಿಸಿರುವ ದೃಢೀಕೃತ ಜಂಟಿ ಸರ್ವೆ ನಕ್ಷೆಯನ್ನು ಆಧರಿಸಿ ಅರ್ಜಿದಾರರು ವಸತಿ ವಿನ್ಯಾಸ ನಕ್ಷೆಯನ್ನು ತಯಾರಿಸಿದ್ದು, ಭೂ ಉಪಯೋಗ ವಿಶ್ಲೇಷಣಾ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ.ಸಂ	ಭೂ ಉಪಯೋಗ	ನಕ್ಷೆಯ ಪ್ರಕಾರ ವಿಸ್ತೀರ್ಣ (ಚ.ಮೀ.ಗಳಲ್ಲಿ)	ನಕ್ಷೆ ಪ್ರಕಾರ ಶೇಕಡವಾರು	ವಲಯ ನಿಯಮಾವಳಿಯಂತೆ ಶೇಕಡವಾರು
1	ವಸತಿ	17,644.51	48.86	ಗರಿಷ್ಠ 55.00
2	ವಾಣಿಜ್ಯ	658.08	01.82	–
3	ಉದ್ಯಾನವನ	3,615.79	10.01	ಕನಿಷ್ಠ 10.00
4	ನಾಗರೀಕ ಸೌಲಭ್ಯ	1,813.86	5.02	ಕನಿಷ್ಠ 5.00

5	ರಸ್ತೆ	12,385.45	34.29	–
	ಒಟ್ಟು	**36117.69**	**100.00**	–

ಜಿಲ್ಲಾಧಿಕಾರಿಗಳ ಆದೇಶ ಸಂಖ್ಯೆ:ಎಲ್‌ಎನ್‌ಡಿ (ಎಸ್)ಸಿಆರ್/67/19–20, ದಿನಾಂಕ:05.03.2020ರಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸುವ ಷರತ್ತಿಗೊಳಪಡಿಸಿ, ಅರ್ಜಿದಾರರು ಕೋರಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗೂರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ಜಮೀನುಗಳಿಗೆ ವಲಯ ನಿಯಮಾವಳಿಗಳ ಪ್ರಕಾರ ವಸತಿ ವಿನ್ಯಾಸ ತಯಾರಿಸಿದ್ದು, ಸದರಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ಅನುಮೋದನೆ ಕೋರುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರು ಪ್ರಸ್ತಾವನೆ ಸಂಬಂಧ ಎಲ್ಲಾ ದಾಖಲೆಗಳನ್ನು ಸಲ್ಲಿಸಿರುವುದನ್ನು ಸಭೆಯು ಗಮನಿಸಿತು. ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಚಿಕ್ಕತೋಗೂರು ಗ್ರಾಮದ ಸರ್ವೆ ಸಂಖ್ಯೆ:29/5ರ 0ಎ–32ಗು, ಸರ್ವೆ ಸಂಖ್ಯೆ:31/1ರ 03ಎ–35ಗು, ಸರ್ವೆ ಸಂಖ್ಯೆ:31/2ರ 03ಎ–10ಗು ಮತ್ತು ದೊಡ್ಡತೋಗೂರು ಗ್ರಾಮದ ಸರ್ವೆ ಸಂಖ್ಯೆ:132ರ 01ಎ–09ಗು ರಲ್ಲಿ 0ಎ–02ಗು ಕಾಲುದಾರಿ ಖರಾಬು ಹೊರತುಪಡಿಸಿ ಉಳಿಕೆ 01ಎ–07ಗು ಒಟ್ಟು 09ಎ–04ಗು ಜಮೀನಿನ ಪೈಕಿ ಸ್ಥಳದಲ್ಲಿ ಲಭ್ಯವಿರುವ 08ಎ–37ಗು ವಿಸ್ತೀರ್ಣದ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹೆಗ್ಗಡಿಗೆರೆ ಗ್ರಾಮದ ಸ.ನಂ:28/3ರ 0ಎ–18½ಗು, 29/1ರ 0ಎ–05ಗು, 29/2ರ 0ಎ–29ಗು, 29/3ರ 0ಎ–13ಗು, 29/4ರ 01ಎ–39ಗು, 30/1ರ 01ಎ–9½ಗು, 30/2ರ 0ಎ–26ಗು, 30/3(ಹೊ.ನಂ:30/4)ರ 0ಎ–03ಗು, 31/4 (ಹೊ.ನಂ.31/8)ರ 0ಎ–08ಗು, 31/4ರ 0ಎ–08ಗು, 31/5ರ 0ಎ–13ಗು, 32/2ರ 0ಎ–07ಗು, 32/3ರ 0ಎ–24ಗು, 32/4ರ 0ಎ–24ಗು, 32/1(ಹೊ.ನಂ.32/8)ರ 0ಎ–15ಗು, 32/5ರ 0ಎ–04ಗು, 32/6ರ 0ಎ–03ಗು, 32/7ರ 0ಎ–24ಗು, 33/1ರ 0ಎ–6½ಗು, 33/2ರ 0ಎ–12ಗು, 33/3ರ 0ಎ–04ಗು, 33/4ರ 0ಎ–03ಗು, 33/5ರ 0ಎ–27ಗು (02ಗುಂಟೆ 'ಎ' ಖರಾಬು ಸೇರಿ) ಮತ್ತು ಸ.ನಂ33/8ರ 0ಎ–10ಗು ಒಟ್ಟು 10ಎ–15½ಗು ಪೈಕಿ ನಾಲಾಗೆ ಹೊಂದಿಕೊಂಡಂತೆ ಒತ್ತುವರಿಯಾಗಿರುವ 5¾ಗುಂಟೆ ಹಾಗೂ 05ಗುಂಟೆ 'ಬಿ' ಖರಾಬು ಹೊರತುಪಡಿಸಿ ಉಳಿಕೆ ಒಟ್ಟು 10ಎ–4¾ಗುಂಟೆ ಜಮೀನಿಗೆ ನೀಡಿರುವ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ 2ನೇ ಹಂತದ ಶೇ. 30 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವಂತೆ ಕೋರಿ ಅಧ್ಯಕ್ಷರು ಎಸ್.ಕೆ.ಎಫ್. ಗೃಹ ನಿರ್ಮಾಣ ಸಹಕಾರ ಸಂಘ ನಿ. ರವರು ಸಲ್ಲಿಸಿರುವ ಮನವಿ ಕುರಿತು.**

*****

ಅರ್ಜಿದಾರರು ದಿನಾಂಕ: 30.12.2020ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳು ಪೂರ್ಣಗೊಂಡಿದ್ದರು ಕೋವಿಡ್–19ರ ಕಾರಣದಿಂದ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಲು ವಿಳಂಬವಾಗುತ್ತಿರುವುದಾಗಿ ತಿಳಿಸುತ್ತಾ, ಆದ್ದರಿಂದ 2ನೇ ಹಂತದ ಶೇ. 30ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ ಹಾಗೂ ಬಡಾವಣೆಯ ಉಳಿದ ಎಲ್ಲಾ

ಕಾಮಗಾರಿಗಳನ್ನು ಪೂರ್ಣಗೊಳಿಸಿ ಸಂಬಂಧಪಟ್ಟ ಪ್ರಮಾಣಪತ್ರಗಳನ್ನು ಗರಿಷ್ಠ 9 ತಿಂಗಳೊಳಗಾಗಿ ಸಲ್ಲಿಸಲಾಗುವುದೆಂದು ದೃಢೀಕರಿಸಿರುತ್ತಾರೆ.

ಪರಿಶೀಲಿಸಲಾಗಿ, ದಿನಾಂಕ: 22.12.2017ರಂದು ಜರುಗಿರುವ ಪ್ರಾಧಿಕಾರದ 58ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ: 8ರ ತೀರ್ಮಾನದಂತೆ ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹೆಗ್ಗಡೆಗೆರೆ ಗ್ರಾಮದ ಸ.ನಂ:28/3ರ 0ಎ–18½ಗು, 29/1ರ 0ಎ–05ಗು, 29/2ರ 0ಎ–29ಗು, 29/3ರ 0ಎ–13ಗು, 29/4ರ 01ಎ–39ಗು, 30/1ರ 01ಎ–9½ಗು, 30/2ರ 0ಎ–26ಗು, 30/3(ಹೊ.ನಂ:30/4)ರ 0ಎ–03ಗು, 31/4 (ಹೊ.ನಂ.31/8)ರ 0ಎ–08ಗು, 31/4ರ 0ಎ–08ಗು, 31/5ರ 0ಎ–13ಗು, 32/2ರ 0ಎ–07ಗು, 32/3ರ 0ಎ–24ಗು, 32/4ರ 0ಎ–24ಗು, 32/1(ಹೊ.ನಂ.32/8)ರ 0ಎ–15ಗು, 32/5ರ 0ಎ–04ಗು, 32/6ರ 0ಎ–03ಗು, 32/7ರ 0ಎ–24ಗು, 33/1ರ 0ಎ–6½ಗು, 33/2ರ 0ಎ–12ಗು, 33/3ರ 0ಎ–04ಗು, 33/4ರ 0ಎ–03ಗು, 33/5ರ 0ಎ–27ಗು (02ಗುಂಟೆ 'ಎ' ಖರಾಬು ಸೇರಿ) ಮತ್ತು ಸ.ನಂ33/8ರ 0ಎ–10ಗು ಒಟ್ಟು 10ಎ–15½ಗು ಪೈಕಿ ನಾಲಾಗೆ ಹೊಂದಿಕೊಂಡಂತೆ ಒತ್ತುವರಿಯಾಗಿರುವ 5¾ಗುಂಟೆ ಹಾಗೂ 05ಗುಂಟೆ 'ಬಿ' ಖರಾಬು ಹೊರತುಪಡಿಸಿ ಉಳಿಕೆ ಒಟ್ಟು 10ಎ–4¾ಗುಂಟೆ ಜಮೀನಿಗೆ ದಿನಾಂಕ: 23.02.2018ರಂದು ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ್ದು, ನಂತರ ಅರ್ಜಿದಾರರು ಸದರಿ ವಿನ್ಯಾಸದಲ್ಲಿನ ರಸ್ತೆ, ನಾಗರೀಕ ಸೌಲಭ್ಯ ಮತ್ತು ಉದ್ಯಾನವನ ಪ್ರದೇಶಗಳನ್ನು ಪರಿತ್ಯಾಜನಾ ಪತ್ರದ ಮುಖಾಂತರ ಮುಖ್ಯಾಧಿಕಾರಿಗಳು, ಬಿಡದಿ ಪುರಸಭೆ ಇವರಿಗೆ ಹಸ್ತಾಂತರಿಸಿರುವ ಹಿನ್ನೆಲೆಯಲ್ಲಿ ದಿನಾಂಕ: 20.07.2018ರಂದು ಸದರಿ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇ. 40ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲಾಗಿದೆ. ನಂತರ ಅರ್ಜಿದಾರರು ದಿನಾಂಕ: 01.10.2019ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಬಡಾವಣೆಯಲ್ಲಿನ ಕಾಮಗಾರಿಗಳನ್ನು ಕೈಗೊಂಡಿರುವುದಾಗಿ ತಿಳಿಸುತ್ತಾ, ಪ್ರಾಧಿಕಾರದಿಂದ ಸ್ಥಳಪರಿಶೀಲನೆ ಕೈಗೊಂಡು 2ನೇ ಹಂತದ ಶೇ.30% ನಿವೇಶನಗಳನ್ನು ಬಿಡುಗಡೆಮಾಡುವಂತೆ ಕೋರಿರುತ್ತಾರೆ.

ಈ ಸಂಬಂಧ ದಿನಾಂಕ: 25.10.2019ರಂದು ಪ್ರಾಧಿಕಾರದಿಂದ ಸ್ಥಳ ಪರಿಶೀಲಿಸಲಾಗಿ, ವಿನ್ಯಾಸದಲ್ಲಿನ ರಸ್ತೆ ಕಾಮಗಾರಿಗಳು ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿರುವುದನ್ನು ಗಮನಿಸಲಾಗಿದ್ದು, ಆದ್ದರಿಂದ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ಪಾಲಿಸಿಕೊಂಡು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 08 ಟಿಟಿಪಿ 2013 ದಿನಾಂಕ: 24.05.2014ರಲ್ಲಿ ತಿಳಿಸಿರುವಂತೆ 2ನೇ ಹಂತದ ನಿವೇಶನ ಬಿಡುಗಡೆಗೆ ಸಂಬಂಧಿಸಿರುವ ವಿವಿಧ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಮಾಹಿತಿಯೊಂದಿಗೆ ಸಂಬಂಧಪಟ್ಟ ಇಲಾಖೆಗಳಿಂದ ಪಡೆದಿರುವ ಮುಕ್ತಾಯ ಪ್ರಮಾಣ ಪತ್ರ/ದೃಢೀಕರಣ ಪತ್ರಗಳನ್ನು ಸಲ್ಲಿಸುವಂತೆ ದಿನಾಂಕ: 06.11.2019ರ ಕಛೇರಿ ಪತ್ರದಲ್ಲಿ ಅರ್ಜಿದಾರರಿಗೆ ತಿಳಿಸಲಾಗಿತ್ತು.

ನಂತರ ಅರ್ಜಿದಾರರು ದಿನಾಂಕ: 17.01.2020ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಸದರಿ ಮನವಿಯೊಂದಿಗೆ ಈ ಕೆಳಕಂಡ ಇಲಾಖೆಗಳಿಂದ ಪಡೆದಿರುವ ಪ್ರಮಾಣ ಪತ್ರಗಳನ್ನು ಸಲ್ಲಿಸುತ್ತಾ, ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ದೃಢೀಕರಣ ಪತ್ರವನ್ನು ಇನ್ನೇರಡು ದಿನಗಳಲ್ಲಿ ಸಲ್ಲಿಸುವುದಾಗಿ ತಿಳಿಸುತ್ತಾ, ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಪರಿಷ್ಕೃತ ಅನುಮೋದಿತ ವಿನ್ಯಾಸ ನಕ್ಷೆಯಂತೆ ವಿನ್ಯಾಸದಲ್ಲಿನ ನೀರು ಸರಬರಾಜು (ಪೈಪ್‌ಲೈನ್‌ಗಳನ್ನು ಒಳಗೊಂಡಂತೆ) ವ್ಯವಸ್ಥೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪಡೆದಿರುವ ಮುಕ್ತಾಯ ಪ್ರಮಾಣ ಪತ್ರವನ್ನು ಸಲ್ಲಿಸಿದ ನಂತರವಷ್ಟೇ ಪರಿಶೀಲಿಸಿ ಪ್ರಸ್ತಾವನೆಯ ಕುರಿತು ಮುಂದಿನ ಕ್ರಮ ಜರುಗಿಸಲಾಗುವುದೆಂದು ದಿನಾಂಕ: 27.05.2020ರ ಕಛೇರಿ ಹಿಂಬರದಲ್ಲಿ ಅರ್ಜಿದಾರರಿಗೆ ತಿಳಿಸಲಾಗಿರುತ್ತದೆ.

1. ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.1 ಉಪವಿಭಾಗ, ರಾಮನಗರ ರವರು ಪತ್ರ ಸಂಖ್ಯೆ:ಸಕಾಇಂ/ ಲೋಬೊಜಸಾಇ/ ನಂ.1.ಉ.ವಿ/ರಾಮನಗರ/ದೃಪ/2019–20/810 ದಿನಾಂಕ:30.12.2019ರಲ್ಲಿ ಬಡಾವಣೆಯಲ್ಲಿ ಸಿ.ಡಿ. ಹಾಗೂ ಮಳೆ ನೀರಿನ ಚರಂಡಿ ನಿರ್ಮಿಸಿದ್ದು, ರಸ್ತೆಗೆ ಡಾಂಬರೀಕರಣ ಮಾಡಬೇಕಾಗಿರುವುದಾಗಿ ತಿಳಿಸಿರುತ್ತಾರೆ.
2. ಮುಖ್ಯಾಧಿಕಾರಿಗಳು, ಬಿಡದಿ ಪುರಸಭೆರವರು ಪತ್ರ ಸಂಖ್ಯೆ:ಪು.ಕಾ.ಬಿ/ಕಂ.ಶಾ/ಆ.ತೆ.ವ/ಸಿ.ಆರ್/ 378/ 2017–18 ದಿನಾಂಕ:07.01.2020ರಲ್ಲಿ ಪ್ರಾಧಿಕಾರದ ದಿನಾಂಕ: 27.08.2018ರ ನಿವೇಶನ ಬಿಡುಗಡೆ ಪ್ರಮಾಣ ಪತ್ರದಂತೆ ಬಿಡುಗಡೆಯಾಗಿರುವ ಶೇ.40ರಷ್ಟು (55) ನಿವೇಶನಗಳಿಗೆ ಎಸ್.ಕೆ.ಎಫ್. ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಬೆಂಗಳೂರು ರವರನ್ನು ಆಸ್ತಿ ತೆರಿಗೆದಾರರನ್ನಾಗಿ ಆಸ್ತಿ ತೆರಿಗೆವಹಿಯಲ್ಲಿ ದಾಖಲಿಸಿಕೊಂಡು ಅಧಿಕೃತ ನಮೂನೆ–03ನ್ನು ನೀಡಲಾಗಿರುತ್ತದೆ ಎಂದು ದೃಢೀಕರಿಸಲಾಗಿದೆ.

ಈ ಸಂಬಂಧ ಅರ್ಜಿದಾರರು ದಿನಾಂಕ: 03.07.2020ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿರವರಿಂದ ಮುಕ್ತಾಯ ಪ್ರಮಾಣ ಪತ್ರವು ಇನ್ನೂ ಎರಡು ಮೂರು ದಿನಗಳಲ್ಲಿ ಸಿಗುವ ನಿರೀಕ್ಷೆ ಇರುವುದಾಗಿ ಆದ್ದರಿಂದ ಷರತ್ತುಗಳಿಗೊಳಪಟ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ತಮ್ಮ ಅಭ್ಯಂತರವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮುಖ್ಯ ಅಭಿಯಂತರರು, ಕ.ನ.ನೀ.ಸ. ಮತ್ತು ಒ.ಚ.ಮಂಡಳಿ ಬೆಂಗಳೂರು ರವರು ಪತ್ರ ಸಂಖ್ಯೆ: ಕಜಮಂ/ ತಾಂತ್ರಿಕ/ಮು.ಅ(ಬೆ)/ಖಾ.ಬ/ಬಿಡದಿ–ಹೋಬಳಿ/1429 ದಿನಾಂಕ: 11.11.2020ರ ಪತ್ರದಲ್ಲಿ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯ ನಡವಳಿ ಕ್ರಮ ಸಂಖ್ಯೆ7(ಎ)ಅನ್ವಯ ಮಂಡಳಿ ವತಿಯಿಂದ ಅಂದಾಜು ಪಟ್ಟಿ ಪಡೆದು, ಮಂಡಳಿಯ ಉಸ್ತುವಾರಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದಾಗಿ, ಆದರೆ ತಾವು ಮಂಡಳಿ ವತಿಯಿಂದ ಯಾವುದೇ ಅಂದಾಜು ಪಟ್ಟಿಗಳನ್ನು ಪಡೆದಿರುವುದಿಲ್ಲವೆಂದು ಹಾಗೂ ಮಂಡಳಿಯ ಉಸ್ತುವಾರಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲವೆಂದು, ಆದುದರಿಂದ ಪ್ರಸ್ತಾವನೆಗೆ ನಿಯಮಾನುಸಾರ ಮಂಡಳಿ ವತಿಯಿಂದ ಮುಕ್ತಾಯ ಪ್ರಮಾಣ ಪತ್ರವನ್ನು ನೀಡಲು ಅವಕಾಶ ಇರುವುದಿಲ್ಲವೆಂದು ತಿಳಿಸುತ್ತಾ, ಬಡಾವಣೆಗೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳಿಗೆ ಅಂದಾಜು ಪಟ್ಟಿಗಳನ್ನು ಪಡೆದುಕೊಂಡು ಮಂಡಳಿಯ ಉಸ್ತುವಾರಿಯಡಿಯಲ್ಲಿ ಕೈಗೆತ್ತಿಕೊಳ್ಳಲು ಸೂಚಿಸಿರುವ ಮೊದಲೇ ಅಂದರೆ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಬರುವ ಮೊದಲೇ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಎಂದು ತಿಳಿದುಬಂದಿರುವುದರಿಂದ, ಪ್ರಾಧಿಕಾರದಿಂದ ನಿಯಮಾನುಸಾರ ಕ್ರಮಕೈಗೊಳ್ಳಲು ಕೋರಿರುತ್ತಾರೆ.

ತದನಂತರ ಅರ್ಜಿದಾರರು ದಿನಾಂಕ: 10.12.2020ರಂದು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಕೆಲವೊಂದು ಅಂಶಗಳನ್ನು ಪ್ರಸ್ತಾಪಿಸುತ್ತಾ, ನೀರು ಸರಬರಾಜು ಹಾಗೂ ಒಳಚರಂಡಿ ಕಾಮಗಾರಿಗಳ ಮುಕ್ತಾಯ ಪ್ರಮಾಣ ಪತ್ರವನ್ನು ಕರ್ನಾಟಕ ನಗರ ನೀರು ಸರಬರಾಜು ಮಂಡಳಿ ಬೆಂಗಳೂರು ಇವರಿಂದಲೇ ಪಡೆದು ಸಲ್ಲಿಸಬೇಕೋ (ಈಗಾಗಲೇ ಮುಕ್ತಾಯ ಪ್ರಮಾಣ ಪತ್ರವನ್ನು ನೀಡಲು ಅವಕಾಶವಿರುವುದಿಲ್ಲವೆಂದು ಹೇಳಿರುವುದರಿಂದ) ಅಥವಾ ಸ್ಥಳೀಯ ಸಕ್ಷಮ ಪ್ರಾಧಿಕಾರದಿಂದ ಸಲ್ಲಿಸಬೇಕೋ ಎನ್ನುವ ವಿಷಯದ ಬಗ್ಗೆ ತಕ್ಷಣವೇ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿದ್ದ ಹಿನ್ನೆಲೆಯಲ್ಲಿ ಮುಖ್ಯ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರ ಉಲ್ಲೇಖ(1)ರ ಪತ್ರದಲ್ಲಿನ ಅಂಶಗಳ ಬಗ್ಗೆ ಸೂಕ್ತ ಸಮಜಾಯಿಷಿ ನೀಡುವಂತೆ ತಿಳಿಸುತ್ತಾ, ಪ್ರಾಧಿಕಾರದ ದಿನಾಂಕ:23.02.2018ರ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶದಲ್ಲಿ ವಿಧಿಸಿರುವ ಷರತ್ತು ಸಂಖ್ಯೆ:7(c) ರಂತೆ ಮತ್ತು ಈ ಕಛೇರಿ ಪತ್ರಗಳಲ್ಲಿ ಈಗಾಗಲೇ ತಿಳಿಸಿರುವಂತೆ ಸದರಿ

ವಿನ್ಯಾಸದಲ್ಲಿನ ನೀರು ಸರಬರಾಜು (ಪೈಪ್ ಲೈನ್‌ಗಳನ್ನು ಒಳಗೊಂಡಂತೆ) ವ್ಯವಸ್ಥೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿದ ನಂತರವಷ್ಟೇ ಪರಿಶೀಲಿಸಿ ಪ್ರಸ್ತಾವನೆ ಕುರಿತು ಮುಂದಿನ ಕ್ರಮವಹಿಸಲಾಗುವುದೆಂದು ದಿನಾಂಕ: 29.12.2020 ರ ಕಛೇರಿ ಪತ್ರದಲ್ಲಿ ಅರ್ಜಿದಾರರಿಗೆ ತಿಳಿಸಲಾಗಿತ್ತು. ಆದರೆ, ಅರ್ಜಿದಾರರು ಈವರೆವಿಗೂ ಸದರಿ ವಿನ್ಯಾಸದಲ್ಲಿನ ನೀರು ಸರಬರಾಜು (ಪೈಪ್ ಲೈನ್‌ಗಳನ್ನು ಒಳಗೊಂಡಂತೆ) ವ್ಯವಸ್ಥೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪಡೆದಿರುವ ಮುಕ್ತಾಯ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ.

ಪ್ರಾಧಿಕಾರದಿಂದ ದಿನಾಂಕ: 23.02.2018ರಂದು ನೀಡಿರುವ ಪರಿಷೃತ ವಸತಿ ವಿನ್ಯಾಸ ಅನುಮೋದನೆ ಆದೇಶದಲ್ಲಿನ ಷರತ್ತು ಸಂಖ್ಯೆ: 1ರಲ್ಲಿ "ಈ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನಾಂಕದಿಂದ ಎರಡು (02) ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ಕನಿಷ್ಠ ಮೂರು (03) ತಿಂಗಳ ಮೊದಲೇ ನವೀಕರಿಸಿಕೊಳ್ಳತಕ್ಕದ್ದು." ಎಂಬ ಷರತ್ತನ್ನು ವಿಧಿಸಿದ್ದು, ಅದರಂತೆ ಪ್ರಾಧಿಕಾರದಿಂದ ನೀಡಿರುವ ಪರಿಷೃತ ವಸತಿ ವಿನ್ಯಾಸ ನಕ್ಷೆಯ ಅನುಮೋದನೆಯ 02 ವರ್ಷಗಳ ಕಾಲವಕಾಶವು ದಿನಾಂಕ: 22.02.2020ಕ್ಕೆ ಈಗಾಗಲೇ ಮುಕ್ತಾಯಗೊಂಡಿರುತ್ತದೆ ಹಾಗೂ 2ನೇ ಹಂತದ ಶೇ. 30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ ಅರ್ಜಿದಾರರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಪಡೆದಿರುವ ಮುಕ್ತಾಯ ಪ್ರಮಾಣ ಪತ್ರವನ್ನು ಸಲ್ಲಿಸುವುದು ಬಾಕಿ ಇದ್ದು, ಪ್ರಸ್ತಾವನೆ ಸಂಬಂಧ ಲೋಕೋಪಯೋಗಿ ಇಲಾಖೆ ಮತ್ತು ಬಿಡದಿ ಪುರಸಭೆಯಿಂದ ನೀಡಿರುವ ದೃಢೀಕರಣ ಪತ್ರಗಳನ್ನು ಸಲ್ಲಿಸಿರುತ್ತಾರೆ. ಸದರಿ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸುತ್ತಾ, ಅರ್ಜಿದಾರರು ದಿನಾಂಕ: 30.12.2020ರಂದು ಪ್ರಾಧಿಕಾರಕ್ಕೆ ಸಲ್ಲಿಸಿರುವ ಮನವಿಯಲ್ಲಿ ಕೋರಿರುವಂತೆ ವಿನ್ಯಾಸದಲ್ಲಿನ 2ನೇ ಹಂತದ ಶೇ.30ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ನೀಡಿರುವ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆಯ ಎರಡು (02) ವರ್ಷಗಳ ಕಾಲಾವಕಾಶವು ಮುಕ್ತಾಯಗೊಂಡಿರುವುದನ್ನು ಸಭೆಯು ಗಮನಿಸಿ, ಸದರಿ ಪರಿಷ್ಕೃತ ವಸತಿ ವಿನ್ಯಾಸ ಅನುಮೋದನೆಯ ಕಾಲಾವಕಾಶವನ್ನು ದಿನಾಂಕ:22.02.2023 ರವರೆಗೆ (ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ದಿನಾಂಕದಿಂದ 05 ವರ್ಷಗಳು) ನವೀಕರಿಸಲು ತೀರ್ಮಾನಿಸಿತು. ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 08 ಟಿಟಿಪಿ 2013 ದಿನಾಂಕ:24.05.2014ರಂತೆ ಪ್ರಸ್ತಾವನೆ ಸಂಬಂಧ ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ನಂ.1 ಉಪವಿಭಾಗ, ರಾಮನಗರ ರವರು ಬಡಾವಣೆಯಲ್ಲಿ ಸಿ.ಡಿ. ಹಾಗೂ ಮಳೆ ನೀರಿನ ಚರಂಡಿ ನಿರ್ಮಿಸಿದ್ದು, ರಸ್ತೆಗೆ ಡಾಂಬರೀಕರಣ ಮಾಡಬೇಕಾಗಿರುವುದಾಗಿ ತಿಳಿಸಿರುವುದರಿಂದ ಹಾಗೂ ಪ್ರಾಧಿಕಾರದಿಂದ ಬಿಡುಗಡೆಯಾಗಿರುವ ಶೇ.40ರಷ್ಟು (55) ನಿವೇಶನಗಳಿಗೆ ಆಸ್ತಿ ತೆರಿಗೆ ದಾಖಲಿಸಿಕೊಂಡು ಅಧಿಕೃತ ನಮೂನೆ–03ನ್ನು ನೀಡಿರುವುದಾಗಿ ಮುಖ್ಯಾಧಿಕಾರಿಗಳು, ಬಿಡದಿ ಪುರಸಭೆರವರು ದೃಢೀಕರಿಸಿರುವುದರಿಂದ, ವಿನ್ಯಾಸದಲ್ಲಿನ ನೀರು ಸರಬರಾಜು ವ್ಯವಸ್ಥೆ (OHT ಹೊರತುಪಡಿಸಿ) ಮತ್ತು ಒಳಚರಂಡಿ ಕಾಮಗಾರಿ (STP ಹೊರತುಪಡಿಸಿ) ಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಮುಕ್ತಾಯ ಪ್ರಮಾಣ ಪತ್ರ ಪಡೆದು ತದನಂತರ, ಅರ್ಜಿದಾರರು ಕೋರಿರುವಂತೆ ಸದರಿ ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ 2ನೇ ಹಂತದ ಶೇ.30ರಷ್ಟು, ನಿವೇಶನಗಳನ್ನು ಬಿಡುಗಡೆಗೊಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ: 20/2ರ 04ಎ–19ಗು, ಸರ್ವೆ ಸಂಖ್ಯೆ:23ರ 04ಎ–10ಗು, ಸರ್ವೆ ಸಂಖ್ಯೆ:24ರ 08ಎ–09ಗು, ಸರ್ವೆ ಸಂಖ್ಯೆ:25/1ರ 02ಎ–01½ಗು ಮತ್ತು ಸರ್ವೆ ಸಂಖ್ಯೆ:25/2ರ 02ಎ–01½ಗು ಒಟ್ಟು 21ಎ–01ಗು ವಿಸ್ತೀರ್ಣದ ಜಮೀನಿಗೆ ನೀಡಿರುವ ವಸತಿ ವಿನ್ಯಾಸ ಅನುಮೋದನೆಯನ್ನು ನವೀಕರಿಸಲು ಕೋರಿರುವ ಬಗ್ಗೆ.**

*****

ಅರ್ಜಿದಾರರಾದ ಮೆ॥ ಶ್ರೀ ರಾಯಲ ಸೀಮಾ ಹೈ–ಸ್ಟ್ರೆಂತ್ ಹೈಪೋ ಲಿಮಿಟೆಡ್ ಇವರು ಪ್ರಾಧಿಕಾರಕ್ಕೆ **ದಿನಾಂಕ:26.11.2020**ರಂದು ಮನವಿ ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ಸಂಖ್ಯೆ:20/2ರ 04ಎ–19ಗು, ಸರ್ವೆ ಸಂಖ್ಯೆ:23ರ 04ಎ–10ಗು, ಸರ್ವೆ ಸಂಖ್ಯೆ:24ರ 08ಎ–09ಗು, ಸರ್ವೆ ಸಂಖ್ಯೆ:25/1ರ 02ಎ–01½ಗು ಮತ್ತು ಸರ್ವೆ ಸಂಖ್ಯೆ:25/2ರ 02ಎ–01½ಗು ಒಟ್ಟು 21ಎ–01ಗು ವಿಸ್ತೀರ್ಣದ ಜಮೀನಿಗೆ ದಿನಾಂಕ:26.02.2019ರಂದು ನೀಡಿರುವ ವಸತಿ ವಿನ್ಯಾಸ ಅನುಮೋದನೆಯನ್ನು ನವೀಕರಿಸಲು ಕೋರಿರುತ್ತಾರೆ.

ಪರಿಶೀಲಿಸಲಾಗಿ, ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ವ.ವಿ/02/2016–17, ದಿನಾಂಕಃ26.02.2019ರಂದು ಕೆಲವು ನಿಬಂಧನೆಗಳನ್ನು ವಿಧಿಸಿ, ವಿನ್ಯಾಸವನ್ನು ಭೂಮಿಯ ಮೇಲೆ ಅಳವಡಿಸಿ ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಮಾತ್ರ (For Demarcation and Development purpose only) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ, 2015ರ ಕಲಂ 17(2–ಎ)ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲಾಗಿರುತ್ತದೆ ಮತ್ತು ಸದರಿ ಪತ್ರದ ನಿಬಂಧನೆ ಸಂಖ್ಯೆ(1) ರಲ್ಲಿ **" ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ನೀಡಿದ ದಿನಾಂಕದಿಂದ ಎರಡು (02)ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ಕನಿಷ್ಠ 03(ಮೂರು) ತಿಂಗಳು ಮೊದಲೇ ನವೀಕರಿಸಿಕೊಳ್ಳತಕ್ಕದ್ದು"** ಎಂದು ಷರತ್ತು ವಿಧಿಸಲಾಗಿದೆ. ಅದರಂತೆ ದಿನಾಂಕ:25.02.2021ಕ್ಕೆ ಅನುಮೋದಿತ ವಸತಿ ವಿನ್ಯಾಸದ 02ವರ್ಷಗಳ ಅವಧಿಯು ಮುಕ್ತಾಯವಾಗುತ್ತದೆ.

ಮೇಲ್ಕಂಡ ಅಂಶಗಳನ್ವಯ ದಿನಾಂಕ:25.02.2021ಕ್ಕೆ 02ವರ್ಷ ಪೂರ್ಣಗೊಂಡಿರುವುದರಿಂದ, ಅರ್ಜಿದಾರರ ಕೋರಿಕೆಯಂತೆ ಪ್ರಸ್ತುತ ವಿನ್ಯಾಸದ ಅವಧಿಯನ್ನು ವಿಸ್ತರಿಸಿ ನವೀಕರಿಸುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ವಿನ್ಯಾಸಕ್ಕೆ ದಿನಾಂಕಃ26.02.2019ರಂದು ನೀಡಿರುವ ಅನುಮೋದನೆಯು ದಿನಾಂಕ:25.02.2021ಕ್ಕೆ 02ವರ್ಷ ಅವಧಿಯು ಮುಕ್ತಾಯವಾಗುವುದರಿಂದ, ಅರ್ಜಿದಾರರ ಕೋರಿಕೆಯಂತೆ ಪ್ರಸ್ತಾಪಿತ ವಿನ್ಯಾಸವನ್ನು ಅಭಿವೃದ್ಧಿಪಡಿಸಲು ದಿನಾಂಕ:26.02.2021 ರಿಂದ ದಿನಾಂಕ:25.02.2023ರವರೆಗೆ (02 ವರ್ಷ) ಅರ್ಜಿದಾರರಿಗೆ ಹೆಚ್ಚಿನ ಕಾಲಾವಕಾಶ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

IV ಇತರೆ ವಿಷಯಗಳು

1) **ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಮುಂಡುಗದೊರೆ ಗ್ರಾಮದ ಸರ್ವೆ ಸಂಖ್ಯೆ:388ರ 01ಎ–10ಗು ಮತ್ತು 390ರ 01ಎ–10ಗು ಒಟ್ಟು 02ಎ–20ಗು ವಿಸ್ತೀರ್ಣದ ಜಮೀನನ್ನು Quarrying of Gravel, Sand, Clay or Stone ಉದ್ದೇಶಕ್ಕಾಗಿ ಆನ್‌ಲೈನ್ ಮುಖಾಂತರ ಭೂ ಪರಿವರ್ತನೆ ಕೋರಿ ಶ್ರೀ ಸಂತಾನ್ ಜೇಕಬ್ ಮತ್ತು ಶ್ರೀಮತಿ ಕೆ.ಎಂ.ಫಿಲೋಮಿನಾ ಮ್ಯಾಥ್ಯೂ ಇವರು ಸಲ್ಲಿಸಿರುವ ಮನವಿಗೆ ಅಭಿಪ್ರಾಯ ನೀಡಿರುವುದನ್ನು ಸ್ಥಿರೀಕರಿಸಿರುವ ಕುರಿತು.**

*****

ವಿಷಯಕ್ಕೆ ಸಂಬಂಧಿಸಿದಂತೆ, ಅಫಿಡವಿಟ್ ಐಡಿ–235217 ಮತ್ತು ಅಫಿಡವಿಟ್ ಐಡಿ–234198 ರಲ್ಲಿ ಅರ್ಜಿದಾರರು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಮುಂಡುಗದೊರೆ ಗ್ರಾಮದ ಸರ್ವೆ ಸಂಖ್ಯೆ:388ರ 01ಎ–10ಗು ಮತ್ತು 390ರ 01ಎ–10ಗು ಒಟ್ಟು 02ಎ–20ಗು ವಿಸ್ತೀರ್ಣದ ಜಮೀನುಗಳನ್ನು ಕೈಗಾರಿಕೆ (Quarrying) ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಆನ್‌ಲೈನ್‌ನಲ್ಲಿ ಪ್ರತ್ಯೇಖವಾಗಿ ಅರ್ಜಿ ಸಲ್ಲಿಸಿದ್ದು, ಅರ್ಜಿಯೊಂದಿಗೆ ಸರ್ವೆ ನಕ್ಷೆ, ಜಂಟಿ ಅಭಿವೃದ್ಧಿ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡಿರುತ್ತಾರೆ.

ಅರ್ಜಿದಾರರಾದ ಶ್ರೀಮತಿ ಕೆ.ಎಂ.ಫಿಲೋಮಿನಾ ಮ್ಯಾಥ್ಯೂ ಕೋಂ ಕೆ.ಎಂ.ಮ್ಯಾಥ್ಯೂ ಮತ್ತು ಶ್ರೀ ಸಂತಾನ್ ಜೇಕಬ್ ಬಿನ್ ಕೆ.ಎಂ.ಜೇಕಬ್ ರವರು ಆನ್‌ಲೈನ್ ಮೂಲಕ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಮುಂಡುಗದೊರೆ ಗ್ರಾಮದ ಸರ್ವೆ ಸಂಖ್ಯೆ:388ರ 01ಎ–10ಗು ಮತ್ತು 390ರ 01ಎ–10ಗು ವಿಸ್ತೀರ್ಣದ ಜಮೀನನ್ನು ಕೈಗಾರಿಕೆ (Quarrying) ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಲು ಇಚ್ಛಿಸಿದ್ದು, ಸದರಿ ಜಮೀನುಗಳಿಗೆ ನಿಯಮಾನುಸಾರ ರಸ್ತೆ ಸಂಪರ್ಕ ಕಲ್ಪಿಸಿಕೊಂಡು ಜಂಟಿಯಾಗಿ ಅಭಿವೃದ್ಧಿಪಡಿಸುವುದಾಗಿ ಹಾಗೂ ಈ ಸಂಬಂಧ ಯಾವುದೇ ತಕರಾರುಗಳಿದ್ದಲ್ಲಿ ನಾವೇ ಜವಾಬ್ದಾರರಾಗಿರುತ್ತೇವೆ ಎಂದು ಪ್ರಮಾಣೀಕರಿಸಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ. ಪ್ರಸ್ತಾವನೆ ಸಂಬಂಧ ಸಲ್ಲಿಸಿರುವ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಶ್ರೀರಂಗಪಟ್ಟಣ ತಾಲ್ಲೂಕು ರವರು ದೃಢೀಕರಿಸಿರುವ ಜಂಟಿ ಸರ್ವೆ ನಕ್ಷೆಯಲ್ಲಿ ಸರ್ವೆ ಸಂಖ್ಯೆ:388 ಮತ್ತು 390 ಸರ್ವೆ ಸಂಖ್ಯೆ: 351ರ ಸರ್ಕಾರಿ ಗೋಮಾಳದಲ್ಲಿ ದುರಸ್ತಾಗಿರುವ ಸರ್ವೆ ನಂಬರ್‌ಗಳಾಗಿರುತ್ತವೆ ಎಂದು ತಿಳಿಸಿರುತ್ತಾರೆ. ಅದರಂತೆ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಗಿರುವ ಮಹಾಯೋಜನೆ ನಕ್ಷೆಯನ್ನು ಪರಿಶೀಲಿಸಲಾಗಿ, ಸರ್ವೆ ಸಂಖ್ಯೆ 351ರ ಪೂರ್ಣ ಜಮೀನನ್ನು ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಪ್ರಾಧಿಕಾರದ ಅನುಮೋದಿತ ವಲಯ ನಿಯಮಾವಳಿಗಳ 3.06.2ರನ್ವಯ ವ್ಯವಸಾಯ ವಲಯದಲ್ಲಿ ವಿಶೇಷ ಸಂದರ್ಭದಲ್ಲಿ Quarrying of Gravel, Sand, Clay or Stone ಉದ್ದೇಶಕ್ಕೆ ಅನುಮತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:V(2) ರ ತೀರ್ಮಾನದಲ್ಲಿ" *ಮಹಾಯೋಜನೆಯ ವಲಯನಿಯಮಾವಳಿಗಳಂತೆ ವಿಶೇಷ ಸಂದರ್ಭದಲ್ಲಿ ಅನುಮತಿಸಬಹುದಾದ ಉದ್ದೇಶಗಳಿಗೆ ಭೂ ಪರಿವರ್ತನೆ ಸಂಬಂಧ ನಿಗಧಿತ ಅವಧಿಯೊಳಗೆ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯ ನೀಡಬೇಕಾಗಿರುವುದರಿಂದ, ಪ್ರಾಧಿಕಾರದ ಮುಂದಿನ ಸಭೆಯ ಮಂಜೂರಾತಿ ನಿರೀಕ್ಷಣೆಯ ಮೇರೆಗೆ ಭೂ ಪರಿವರ್ತನೆ ಸಂಬಂಧ ಕಂದಾಯ ಇಲಾಖೆಗೆ ಪ್ರಾಧಿಕಾರದ ಅಭಿಪ್ರಾಯವನ್ನು ನೀಡಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ".*

ಸಭೆಯ ತೀರ್ಮಾನದಂತೆ, ಪ್ರಸ್ತಾವಿತ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಮುಂಡುಗದೊರೆ ಗ್ರಾಮದ ಸರ್ವೆ ಸಂಖ್ಯೆ:388ರ 01ಎ–10ಗು ಮತ್ತು 390ರ 01ಎ–10ಗು ಒಟ್ಟು 02ಎ–20ಗು ವಿಸ್ತೀರ್ಣದ ಜಮೀನುಗಳಿಗೆ Quarrying of Gravel, Sand, Clay or Stone ಉದ್ದೇಶಕ್ಕೆ ಭೂಪರಿವರ್ತನೆ ಸಂಬಂಧ ಪ್ರಾಧಿಕಾರದಿಂದ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾಗಿದ್ದು, ಭೂ ಪರಿವರ್ತನೆಗೆ ಅಭಿಪ್ರಾಯ ನೀಡಿರುವ ವಿಷಯವನ್ನು ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಮುಂಡುಗದೊರೆ ಗ್ರಾಮದ ಸರ್ವೆ ಸಂಖ್ಯೆ:388ರ 01ಎ–10ಗು ಮತ್ತು 390ರ 01ಎ–10ಗು ಒಟ್ಟು 02ಎ–20ಗು ವಿಸ್ತೀರ್ಣದ ಜಮೀನುಗಳಿಗೆ Quarrying of Gravel, Sand, Clay or Stone ಉದ್ದೇಶಕ್ಕೆ ಭೂ ಪರಿವರ್ತನೆ ಸಂಬಂಧ ದಿನಾಂಕ:04.11.2020ರಂದು ಜರುಗಿದ ಪ್ರಾಧಿಕಾರದ 66ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:V(2)ರ ತೀರ್ಮಾನದನ್ವಯ ಪ್ರಾಧಿಕಾರದಿಂದ ಕಂದಾಯ ಇಲಾಖೆಗೆ ಅಭಿಪ್ರಾಯ ನೀಡಲಾಗಿರುವ ಅಂಶವನ್ನು ಸಭೆಯಲ್ಲಿ ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

2) ಪ್ರಾಧಿಕಾರದಲ್ಲಿ ಸಂಗ್ರಹವಾಗಿರುವ ಕೆರೆ ಸಂರಕ್ಷಣಾ ಶುಲ್ಕದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು.

*****

ಶ್ರೀ ಎಸ್.ಟಿ.ಸೋಮಶೇಖರ್ ಮಾನ್ಯ ಸಹಕಾರ ಸಚಿವರು ಹಾಗೂ ಮಾನ್ಯ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ರವರು ತಮ್ಮ ಪತ್ರ ಸಂಖ್ಯೆ:ಸಸ/2436/2020, ದಿನಾಂಕ:29.10.2020 (ಈ ಕಛೇರಿ ಸ್ವೀಕೃತಿ ದಿ:08.12.2020) ರಲ್ಲಿ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ ವ್ಯಾಪ್ತಿಯ ಪ್ರದೇಶಗಳ ವಾಸವಿರುವ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯ ನೀಡುವ ಸಲುವಾಗಿ ಕಾಮಗಾರಿಗಳು ಅವಶ್ಯಕವಿದ್ದು, ಈ ಕೆಳಕಂಡ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಗೆ ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಅನುಷ್ಠಾನಗೊಳಿಸಬೇಕೆಂದು ತಿಳಿಸಿರುತ್ತಾರೆ.

ಕ್ರ.ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	Improvements and Beautification of Agara Tank at Agara Village in Bengaluru South Taluk	200.00
2	Improvements and Beautification of Hemmigepura Tank at Hemmigepura Village in Bengaluru South Taluk	200.00

ಮುಂದುವರೆದು, ಶ್ರೀ ಮರಿಸ್ವಾಮಿ, ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ರವರು ದಿನಾಂಕ: 19.12.2020 (ಸ್ವೀಕೃತಿ ದಿನಾಂಕ: 23.12.2020)ರ ಪತ್ರದಲ್ಲಿ ರಾಷ್ಟ್ರೀಯ ಹೆದ್ದಾರಿ ಅಕ್ಕಪಕ್ಕದ ಗ್ರಾಮಗಳ ಕೆರೆಗಳು ಸರಿಯಾಗಿ ಅಭಿವೃದ್ಧಿ ಹೊಂದದೆ ನೀರಿನ ಶೇಖರಣೆಯು ಸರಿಯಾಗಿ ಆಗದೆ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಎಲ್ಲಾ ಗ್ರಾಮಸ್ಥರು ಬೋರ್‌ವೆಲ್ ನೀರನ್ನು ಉಪಯೋಗಿಸುತ್ತಿದ್ದು, ಕೆರೆಗಳಲ್ಲಿ ನೀರಿನ ಶೇಖರಣೆ ಸಮರ್ಪಕವಾಗಿ ಇಲ್ಲದಿರುವುದರಿಂದ ಅಂತರ್ಜಲ ಮಟ್ಟವು ಕುಸಿದು ಹೋಗುತ್ತಿರುವುದರಿಂದ ಈ ಹೆದ್ದಾರಿ ಸುತ್ತಮುತ್ತಲಿನ ಗ್ರಾಮಗಳ ಕೆರೆಗಳನ್ನು ಅಭಿವೃದ್ಧಿ ಪಡಿಸಿದ್ದಲ್ಲಿ ಅಂತರ್ಜಲ ನಿವಾರಿಸಬಹುದು, ಆದುದರಿಂದ ಪ್ರಾಧಿಕಾರದಿಂದ ಸೋಂಪುರ ಕೆರೆ, ಹೆಮ್ಮಿಗೆ ಪುರ ಕೆರೆ, ಅಗರ ಕೆರೆ, ಕೆ.ಗೊಲ್ಲಹಳ್ಳಿ ಕೆರೆ, ಚಿನ್ನಕುರ್ಚಿಕೆರೆ, ಗೋಣಿಪುರ

ಗುರಶಾಂತಪ್ಪನಕೆರೆ, ತಿಟ್ಟಹಳ್ಳಿ ಕೆರೆ, ತಿಪ್ಪೂರು ಕೆರೆ ಮತ್ತು ಗಂಗಸಂದ್ರ ಕೆರೆಗಳ ಅಭಿವೃದ್ಧಿಗಾಗಿ ರೂ. 30.00 ಕೋಟಿಗಳ ಅನುದಾನ ನೀಡಬೇಕಾಗಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಸೋಂಪುರ ಗ್ರಾಮದ ಸ.ನಂ. 11 ಮತ್ತು 12ರಲ್ಲಿನ ಕೆರೆಗಳು, ಹೆಮ್ಮಿಗೆಪುರ ಗ್ರಾಮದ ಸ.ನಂ. 4 ಮತ್ತು 61ರ ಕೆರೆಗಳು, ಕೆಂಗೇರಿ ಗೊಲ್ಲಹಳ್ಳಿ ಗ್ರಾಮದ ಸ.ನಂ. 9ರ ಕೆರೆ, ಚಿನ್ನಕುರ್ಚಿ ಗ್ರಾಮದ ಸ.ನಂ. 50ರ ಕೆರೆ, ಗೋಣಿಪುರ ಗ್ರಾಮದಲ್ಲಿನ ಸ.ನಂ. 60, 45 ಮತ್ತು 25ರ ಕೆರೆಗಳು, ತಿಪ್ಪೂರು ಗ್ರಾಮದ ಸ.ನಂ. 44ರ ಕೆರೆಗಳು ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆ ಹಾಗೂ ಅಗರ ಗ್ರಾಮ ಮತ್ತು ತಿಟ್ಟಹಳ್ಳಿ ಗ್ರಾಮ ಹಾಗೂ ಗಂಗಸಂದ್ರದ ಕೆರೆಗಳು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವುದಿಲ್ಲ.

ಸರ್ಕಾರದ ಸುತ್ತೋಲೆ ಸಂಖ್ಯೆ: ಯುಡಿಡಿ 285 ಮೈಅಪ್ರಾ 2016, ದಿನಾಂಕ:03.06.2019ರಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18–1(ಎ) ರಡಿ ಪಾವತಿಸಿಕೊಳ್ಳಲಾಗಿರುವ ಶುಲ್ಕಗಳನ್ನು ಹಾಗೂ ಅದಕ್ಕೆ ಸಂಗ್ರಹವಾಗಿರುವ ಬಡ್ಡಿಯನ್ನು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಡುವ ಕೆರೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನ ಮಾಡುವ ಸಂಬಂಧ II.2 ರಲ್ಲಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆದ್ದರಿಂದ, ಅನುದಾನ ಬಿಡುಗಡೆ ಮಾಡಲು ಕೋರಿರುವ ಕೆರೆಗಳ ಪ್ರಸ್ತಾಪಿತ ಅಭಿವೃದ್ಧಿ ಕಾಮಗಾರಿಗಳ ಪ್ರಾಜೆಕ್ಟ್ ರಿಪೋರ್ಟ್ ಅನ್ನು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಂದ ಪಡೆದು, ಸದರಿ ಕೆರೆಗಳು ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿದ್ದಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ಸಲ್ಲಿಸಬಹುದಾಗಿರುತ್ತದೆ.

ಹಾಗಾಗಿ, ಶ್ರೀ ಎಸ್.ಟಿ.ಸೋಮಶೇಖರ್ – ಮಾನ್ಯ ಸಹಕಾರ ಸಚಿವರು ಹಾಗೂ ಮಾನ್ಯ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ರವರು ಸೂಚಿಸಿರುವಂತೆ ಹಾಗೂ ಶ್ರೀ ಮರಿಸ್ವಾಮಿ, ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ರವರು ಕೋರಿರುವಂತೆ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೆರೆಗಳ ಅಭಿವೃದ್ಧಿ ಮಾಡುವ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ವಿವರವಾಗಿ ಚರ್ಚಿಸಲಾಯಿತು. ಪ್ರಸ್ತುತ ಪ್ರಾಧಿಕಾರದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 18(1–ಎ)ರಡಿ ಪಾವತಿಸಿಕೊಳ್ಳಲಾಗುತ್ತಿರುವಂತೆ ಕೆರ ಸಂರಕ್ಷಣಾ ಶುಲ್ಕದಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದಲ್ಲಿ ಬರುವ ಕೆರೆಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ: ಯುಡಿಡಿ 285 ಮೈಅಪ್ರಾ 2016, ದಿನಾಂಕ:03.06.2019ರಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ಆದರೆ, ಶ್ರೀ ಎಸ್.ಟಿ.ಸೋಮಶೇಖರ್ ಮಾನ್ಯ ಸಹಕಾರ ಸಚಿವರು ಹಾಗೂ ಮಾನ್ಯ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ ರವರು ದಿನಾಂಕ:29.10.2020 ಹಾಗೂ ದಿನಾಂಕ:02.01.2020 ರಂದು ಮತ್ತು ಶ್ರೀ ಮರಿಸ್ವಾಮಿ, ಮಾನ್ಯ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ರವರು ದಿನಾಂಕ:19.12.2020ರಂದು ಪತ್ರಗಳಲ್ಲಿ ಕೋರಿರುವಂತೆ ಪ್ರಾಧಿಕಾರದಲ್ಲಿ ಇದುವರೆವಿಗೂ 2019–20ನೇ ಸಾಲಿನ ಅಂತ್ಯಕ್ಕೆ ಸಂಗ್ರಹವಾಗಿರುವ ರೂ.11,92,28,353/–ಗಳ ಪೈಕಿ ಈ ಕೆಳಕಂಡ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ರೂ.8.0 ಕೋಟಿಗಳನ್ನು ಬಿಡುಗಡೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಕ್ರ.ಸಂ	*ಗ್ರಾಮ*	*ಅಂದಾಜು ಮೊತ್ತ (ರೂ.ಕೋಟಿಗಳಲ್ಲಿ)*
1	*ಕೆ.ಗೊಲ್ಲಹಳ್ಳಿ*	*1.50*
2	*ಬಿ.ಎಂ.ಕಾವಲ್*	*2.00*

3	ಚೆನ್ನಕುರ್ಚಿ	1.50
4	ಗೋಣಿಪುರ	2.00
5	ತಿಪ್ಪೂರು	1.00
	ಒಟ್ಟು	**8.00**

ಮುಂದುವರೆದು, ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟ ಇಲಾಖೆಯಿಂದ (ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆ, ಜಿಲ್ಲಾ ಪಂಚಾಯತ್, ಬೆಂಗಳೂರು) ವಿಸ್ತೃತ ಯೋಜನಾ ವರದಿ (DPR) ಪಡೆದು ಸದರಿ ಕಾಮಗಾರಿಗಳನ್ನು ಸಂಬಂಧಪಟ್ಟ ಇಲಾಖೆಯ ಮುಖಾಂತರವೇ ಕೈಗೊಳ್ಳಲು ಸರ್ಕಾರದ ಅನುಮೋದನೆ ಪಡೆಯುವ ಸಂಬಂಧ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಹ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:101ರ 04ಎ–07ಗು ಪೈಕಿ 03ಎ–33ಗು ಮತ್ತು ಸರ್ವೆ ಸಂಖ್ಯೆ:104/1 (ಹಳೆ ಸರ್ವೆ ಸಂಖ್ಯೆ:104)ರ 02ಎ–26ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನಿಗೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಿರುವ ಸಂಬಂಧ ಪಾವತಿಸಿಕೊಂಡಿರುವ ಶುಲ್ಕದಲ್ಲಿ ಹೆಚ್ಚುವರಿ ಶುಲ್ಕವನ್ನು ಹಿಂದಿರುಗಿಸುವಂತೆ ಮೆ॥ ರೋಲ್ಯಾಂಡ್ ಮೆಡೋಸ್ ಎಸ್ಟೇಟ್ ಪ್ರೈ.ಲಿ ರವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:101ರ 04ಎ–07ಗು ಪೈಕಿ 03ಎ–33ಗು ಮತ್ತು ಸರ್ವೆ ಸಂಖ್ಯೆ:104/1 (ಹಳೆ ಸರ್ವೆ ಸಂಖ್ಯೆ:104)ರ 02ಎ–26ಗು ಒಟ್ಟು 06ಎ–19ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಅರ್ಜಿದಾರರಾದ ಮೆ॥ ರೋಲ್ಯಾಂಡ್ ಮೆಡೋಸ್ ಎಸ್ಟೇಟ್ ಪ್ರೈ.ಲಿ ರವರು ದಿನಾಂಕ:12.06.2019ರಂದು ಮನವಿ ಸಲ್ಲಿಸಿದ್ದ ಹಿನ್ನಲೆಯಲ್ಲಿ, ಸದರಿ ಪ್ರಸ್ತಾವನೆಯನ್ನು ದಿನಾಂಕ:07.09.2020ರಂದು ಜರುಗಿದ ಪ್ರಾಧಿಕಾರದ 65ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:III(7)ರಲ್ಲಿ ಮಂಡಿಸಲಾಗಿ, ಸಭೆಯು ಪ್ರಸ್ತಾಪಿತ ಜಮೀನಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸರ್ವಾನುಮತದಿಂದ ತೀರ್ಮಾನಿಸಿರುತ್ತದೆ.

ಸದರಿ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಸಂಬಂಧ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019, ದಿನಾಂಕ:26.02.2020ರಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: ನೋ.ಮು./ಸಿ.ವಿ.ಸಿ/485/2017–18, ಬೆಂಗಳೂರು, ದಿನಾಂಕ:05.12.2018ರಲ್ಲಿನ ಮಾರುಕಟ್ಟೆ ಮೌಲ್ಯಗಳನ್ನು ಆಧರಿಸಿಕೊಂಡು ಅಗತ್ಯ ಶುಲ್ಕಗಳನ್ನು ಲೆಕ್ಕ ಹಾಕಿ ಸದರಿ ಶುಲ್ಕಗಳನ್ನು ಪಾವತಿಸುವಂತೆ ದಿನಾಂಕ:29.09.2020ರ ಕಛೇರಿಯ ಶುಲ್ಕ ಪಾವತಿ ನೋಟೀಸ್ ನಲ್ಲಿ ಅರ್ಜಿದಾರರಿಗೆ ತಿಳಿಸಲಾಗಿದ್ದು, ಸದರಿ ಶುಲ್ಕ ಪಾವತಿ ನೋಟೀಸ್ ಪ್ರತಿಯನ್ನು ಉಪ ನೋಂದಣಾಧಿಕಾರಿಗಳು, ರಾಮನಗರ ತಾಲ್ಲೂಕು, ರಾಮನಗರ ರವರಿಗೆ ಮಾಹಿತಿಗಾಗಿ ಮತ್ತು ಪರಿಗಣನೆಗೆ ತೆಗೆದುಕೊಂಡಿರುವ ಮಾರುಕಟ್ಟೆ ಮೌಲ್ಯದಲ್ಲಿ ಯಾವುದಾದರೂ ವ್ಯತ್ಯಾಸಗಳಿದ್ದಲ್ಲಿ 07 ದಿನಗಳೊಳಗಾಗಿ ಈ ಬಗ್ಗೆ ಪ್ರಾಧಿಕಾರಕ್ಕೆ ಮಾಹಿತಿ ನೀಡುವಂತೆ ಕೋರಲಾಗಿತ್ತು. ಅದರಂತೆ ದಿನಾಂಕ:29.09.2020ರ ಕಛೇರಿ ಶುಲ್ಕ ಪಾವತಿ ನೋಟೀಸ್‌ನಲ್ಲಿ ತಿಳಿಸಿರುವಂತೆ ಅರ್ಜಿದಾರರು ಬ್ಯಾಂಕ್ ಆಫ್ ಇಂಡಿಯಾ, ರಾಜಾಜಿನಗರ ಶಾಖೆ, ಬೆಂಗಳೂರು ಇಲ್ಲಿನ ಡಿ.ಡಿ.ಗಳ ಸಂಖ್ಯೆ 000840, 000841, 000842, 000843, 000844 ಮತ್ತು 000845, ದಿನಾಂಕ:29.09.2020ರ ಮುಖೇನ ಪಾವತಿಸಿರುತ್ತಾರೆ.

ಪ್ರಸ್ತಾವನೆ ಸಂಬಂಧ ಈಗಾಗಲೇ ದಿನಾಂಕ:06.10.2020ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಆದರೆ ಇದೀಗ ಉಪನೋಂದಣಾಧಿಕಾರಿಗಳು, ರಾಮನಗರ ತಾಲ್ಲೂಕು, ರಾಮನಗರ ರವರು ಪತ್ರ ಸಂಖ್ಯೆ: ಉನೋಕ/ರಾ/317/2020–21, ದಿನಾಂಕ:24.11.2020ರಲ್ಲಿ ಮಾನ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: ನೋ.ಮು./ಸಿ.ವಿ.ಸಿ /485/2017–18, ಬೆಂಗಳೂರು, ದಿನಾಂಕ:05.12.2018ರಲ್ಲಿನ ಪುಟ ಸಂಖ್ಯೆ:180, ಕ್ರಮ ಸಂಖ್ಯೆ:61ರಲ್ಲಿ ತಾಳಗುಪ್ಪೆ ಗ್ರಾಮದ ಸರ್ವೆ ಸಂಖ್ಯೆ:101ರ ಜಮೀನಿಗೆ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯ ಖುಷ್ಕಿ ಜಮೀನಿಗೆ ಎಕರೆಗೆ ರೂ.34ಲಕ್ಷ ನಿಗಧಿಪಡಿಸಲಾಗಿದೆ ಹಾಗೂ ಸರ್ವೆ ಸಂಖ್ಯೆ:104ರ ಜಮೀನಿಗೆ ನಿರ್ದಿಷ್ಟವಾಗಿ ಮಾರುಕಟ್ಟೆ ಮೌಲ್ಯ ನಿಗಧಿಪಡಿಸದೇ ಇದ್ದು, ಆದರೆ ಸದರಿ ತಾಳಗುಪ್ಪೆ ಗ್ರಾಮದ ಖುಷ್ಕಿ, ತರಿ ಮತ್ತು ಭಾಗಾಯ್ತು ಜಮೀನುಗಳಿಗೆ ರೂ.19ಲಕ್ಷ, 22ಲಕ್ಷ ಮತ್ತು 27ಲಕ್ಷಗಳಂತೆ ನಿಗಧಿಪಡಿಸಲಾಗಿದೆ ಎಂದು ತಿಳಿಸುತ್ತಾ, ಪ್ರಾಧಿಕಾರದಿಂದ ಸರ್ವೆ ಸಂಖ್ಯೆ:101 ಮತ್ತು ಸರ್ವೆ ಸಂಖ್ಯೆ:104/1 (ಹಳೆ ಸರ್ವೆ ನಂ:104)ರ ಜಮೀನುಗಳಿಗೆ ಒಟ್ಟಾರೆಯಾಗಿ ರೂ.34ಲಕ್ಷಗಳನ್ನೇ ಪರಿಗಣನೆಗೆ ತೆಗೆದುಕೊಂಡಿರುವ ಮಾರುಕಟ್ಟೆ ಮೌಲ್ಯದ ಬದಲಾಗಿ ಸರ್ವೆ ಸಂಖ್ಯೆ: 101ರ ಜಮೀನಿಗೆ ರೂ.34ಲಕ್ಷಗಳನ್ನು ಹಾಗೂ ಸರ್ವೆ ನಂಬರ್:104/1 (ಹಳೆ ಸರ್ವೆ ನಂ:104)ರ ಖುಷ್ಕಿ ಜಮೀನಿಗೆ ದಿನಾಂಕ:05.12.2018ರ ಅಧಿಸೂಚನೆಯಲ್ಲಿನ ಪುಟ ಸಂಖ್ಯೆ:180, ಕ್ರಮ ಸಂಖ್ಯೆ:60ರಲ್ಲಿ ತಾಳಗುಪ್ಪೆ ಗ್ರಾಮಕ್ಕೆ ನಿಗಧಿಪಡಿಸಿರುವ ರೂ.19 ಲಕ್ಷಗಳನ್ನು ಮಾತ್ರ ಮಾರುಕಟ್ಟೆ ಮೌಲ್ಯಗಳನ್ನಾಗಿ ಗಣನೆಗೆ ತೆಗೆದುಕೊಂಡು ಪ್ರಸ್ತಾವನೆ ಸಂಬಂಧ ಶುಲ್ಕಗಳನ್ನು ಲೆಕ್ಕ ಹಾಕಿ ಪರಿಗಣನೆಗೆ ತೆಗೆದುಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ತದನಂತರ, ಅರ್ಜಿದಾರರು ದಿನಾಂಕ:31.12.2020ರಂದು ಮನವಿ ಸಲ್ಲಿಸಿ, ಉಪ ನೋಂದಣಾ ಕಛೇರಿ ರಾಮನಗರ ತಾಲ್ಲೂಕು, ರಾಮನಗರ ಇವರ ಪತ್ರ ಸಂಖ್ಯೆ:ಉನೋ/ತಾ/ರಾ/317/2020–21, ದಿನಾಂಕ:24.11.2020ರಲ್ಲಿ ಸರ್ವೆ ಸಂಖ್ಯೆ:101ಕ್ಕೆ 34,00,000/– ಲಕ್ಷ ರೂಪಾಯಿಗಳು ಹಾಗೂ ಸರ್ವೆ ಸಂಖ್ಯೆ:104/1ಕ್ಕೆ 19,00,000/–ಲಕ್ಷವೆಂದು ಪರಿಗಣಿಸಿ ಎಂದು ತಿಳಿಸಿರುವುದರಿಂದ, ಸರ್ವೆ ಸಂಖ್ಯೆ:104/1ಕ್ಕೆ ರೂ.19,00,000/– ಲಕ್ಷವನ್ನು ಮಾತ್ರ ಪರಿಗಣಿಸಿ ಉಳಿದ ಹೆಚ್ಚುವರಿ ಶುಲ್ಕವನ್ನು ಹಿಂದಿರುಗಿಸಬೇಕೆಂದು ಕೋರಿರುತ್ತಾರೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ: ನೋ.ಮು./ಸಿ.ವಿ.ಸಿ /485/2017–18, ಬೆಂಗಳೂರು, ದಿನಾಂಕ:05.12.2018ರಲ್ಲಿನ ಕ್ರಮ ಸಂಖ್ಯೆ:4 ರಲ್ಲಿ "**ಮಾರ್ಗಸೂಚಿ ಪಟ್ಟಿಯಲ್ಲಿ ದರ ನಿಗಧಿಪಡಿಸದೇ ಇರುವ ಕೃಷಿ** (5 ಗುಂಟೆ ವಿಸ್ತೀರ್ಣದವರೆಗಿನ ಜಮೀನು ಸೇರಿ) / ಕೃಷಿಯೇತರ ಜಮೀನುಗಳು/ಸ್ವತ್ತುಗಳಿಗೆ ರಾಷ್ಟ್ರೀಯ ಹೆದ್ದಾರಿ/ ಬೈಪಾಸ್/ವರ್ತುಲ ರಸ್ತೆಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಗಳಿಗೆ 50% ರಷ್ಟು, ರಾಜ್ಯ ಹೆದ್ದಾರಿಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಕ್ಕೆ 35% ರಷ್ಟು ಜಿಲ್ಲಾ ಮುಖ್ಯ ರಸ್ತೆ ಅಥವಾ 80 ಅಡಿ ಅಗಲದ (ಆರ್ಟೀರಿಯಲ್) ರಸ್ತೆಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಕ್ಕೆ 30%ರಷ್ಟು, **ಇತರೆ ರಸ್ತೆಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಗಳ ಶೇ.25% ರಷ್ಟು ಹೆಚ್ಚಿಗೆ ದರ ನಿಗಧಿಪಡಿಸುವುದು**" ಎಂದಿರುತ್ತದೆ. ಪ್ರಸ್ತಾಪಿತ ಜಮೀನಿನ ಪೈಕಿ ಸರ್ವೆ ಸಂಖ್ಯೆ:104/1ರ ಜಮೀನಿಗೆ ಮಾರುಕಟ್ಟೆ ಮೌಲ್ಯ ನಿಗಧಿಪಡಿಸದೇ ಇದ್ದು, ಸದರಿ ಜಮೀನು ಸರ್ವೆ ಸಂಖ್ಯೆ:101ರ ಜಮೀನಿಗೆ ಹೊಂದಿಕೊಂಡಂತೆ ಇದ್ದ ಹಿನ್ನಲೆಯಲ್ಲಿ ಸರ್ವೆ ಸಂಖ್ಯೆ:104/1ರ ಜಮೀನಿಗೂ ಸಹ 34 ಲಕ್ಷಗಳನ್ನು ಪರಿಗಣಿಸಿ ಪ್ರಸ್ತಾವನೆ ಸಂಬಂಧ ಶುಲ್ಕಗಳನ್ನು ಲೆಕ್ಕ ಹಾಕಲಾಗಿತ್ತು.

ಆದರೆ ಇದೀಗ ಉಪನೋಂದಣಾಧಿಕಾರಿಗಳು, ರಾಮನಗರ ತಾಲ್ಲೂಕು, ರಾಮನಗರ ರವರು ದಿನಾಂಕ:24.11.2020ರ ತಮ್ಮ ಪತ್ರದಲ್ಲಿ ಸರ್ವೆ ಸಂಖ್ಯೆ:104/1ರ ಜಮೀನಿಗೆ ರೂ.19 ಲಕ್ಷಗಳನ್ನು ಮಾತ್ರ ಪರಿಗಣಿಸಿ ಶುಲ್ಕಗಳನ್ನು ಲೆಕ್ಕ ಹಾಕುವಂತೆ ತಿಳಿಸಿರುವುದರಿಂದ, ಅದರಂತೆ ಲೆಕ್ಕ ಹಾಕಲಾಗಿರುವ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತವೆ.

ಕ್ರ.ಸಂ	ವಿವರ	ಈಗಾಗಲೇ ಪಾವತಿಸಿಕೊಂಡಿರುವ ಶುಲ್ಕ	ಉಪನೋಂದಣಾಧಿಕಾರಿಗಳು, ರಾಮನಗರ ತಾಲ್ಲೂಕು, ರಾಮನಗರ ರವರ ದಿನಾಂಕ:24.11.2020ರ ಪತ್ರಕ್ಕನುಗುಣವಾಗಿ ಸರ್ವೆ ಸಂಖ್ಯೆ:101ರ ಜಮೀನಿಗೆ ರೂ.56,10,000/- (34x1.65) ಗಳನ್ನು ಹಾಗೂ ಸರ್ವೆ ಸಂಖ್ಯೆ:104/1ರ ಜಮೀನಿಗೆ ರೂ.39,18,750/- (19x1.65 x 1.25) ಗಳನ್ನು ಪರಿಗಣಿಸಿ ಲೆಕ್ಕ ಹಾಕಿರುವ ಶುಲ್ಕ	ವ್ಯತ್ಯಾಸದ ಮೊತ್ತ
1	ಕೆ.ಟಿ.ಸಿ.ಪಿ ಕಾಯ್ದೆ 1961 ಕಲಂ 18(1)ರ ಶುಲ್ಕ	6,55,100	6,55,100	–
2	ಕೆರೆ ಸಂರಕ್ಷಣಾ ಶುಲ್ಕ	6,55,100	6,55,100	–
3	ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019ರ 37–C(i) ರ ಶುಲ್ಕ	90,900	63,800	27,200
	ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019ರ 37–C(i i) ರ ಶುಲ್ಕ	90,900	63,800	27,200
	ಕರ್ನಾಟಕ ಯೋಜನಾ ಪ್ರಾಧಿಕಾರಗಳ (ತಿದ್ದುಪಡಿ) ನಿಯಮಗಳು 2019ರ 37–C(iii) ರ ಶುಲ್ಕ	45,500	31,900	13,600
4	ಪರಿಶೀಲನಾ ಶುಲ್ಕ	13,200	13,200	–
	ಒಟ್ಟು	**15,50,700**	**14,82,900**	**67,800**

ಉಪನೋಂದಣಾಧಿಕಾರಿಗಳು, ರಾಮನಗರ ತಾಲ್ಲೂಕು, ರಾಮನಗರ ರವರ ದಿನಾಂಕ:24.11.2020ರ ಪತ್ರದಲ್ಲಿ ತಿಳಿಸಿರುವ ಮಾರುಕಟ್ಟೆ ಮೌಲ್ಯಗಳನ್ನು ಆಧರಿಸಿಕೊಂಡು ಪ್ರಸ್ತಾವನೆ ಕುರಿತು ಮೇಲ್ಕಂಡಂತೆ ಶುಲ್ಕಗಳನ್ನು ಲೆಕ್ಕ ಹಾಕಲಾಗಿದ್ದು, ಸದರಿ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ತರುತ್ತಾ, ಅರ್ಜಿದಾರರು ಕೋರಿರುವಂತೆ ಮೇಲ್ಕಂಡ ವ್ಯತ್ಯಾಸದ ಶುಲ್ಕವನ್ನು ಅರ್ಜಿದಾರರಿಗೆ ಹಿಂದಿರುಗಿಸುವ ಕುರಿತು ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿದೆ

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಸೂಚನೆ ಸಂಖ್ಯೆ:ನೋ.ಮು./ಸಿ.ವಿ.ಸಿ/485/2017–18, ಬೆಂಗಳೂರು, ದಿನಾಂಕ:05.12.20182018 ರಲ್ಲಿನ ಕ್ರಮ ಸಂಖ್ಯೆ:4 ರಲ್ಲಿ ಮಾರ್ಗಸೂಚಿ ಪಟ್ಟಿಯಲ್ಲಿ ದರ ನಿಗಧಿಪಡಿಸದೇ ಇರುವ ಕೃಷಿ ಜಮೀನುಗಳು ಇತರೆ ರಸ್ತೆಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಗಳ ಶೇ.25% ರಷ್ಟು ಹೆಚ್ಚಿಗೆ ದರ ನಿಗಧಿಪಡಿಸುವಂತೆ ಸೂಚಿಸಿರುವ ಮೇರೆಗೆ ಪ್ರಸ್ತಾವನೆ ಸಂಬಂಧ ಶುಲ್ಕಗಳನ್ನು ವಿಧಿಸಲಾಗಿದ್ದು, ಆದರೆ ಇದೀಗ ಉಪನೋಂದಣಾಧಿಕಾರಿಗಳು, ರಾಮನಗರ ತಾಲ್ಲೂಕು, ರಾಮನಗರ ರವರು ಸರ್ವೆ ಸಂಖ್ಯೆ:101ಕ್ಕೆ 34 ಲಕ್ಷ ಹಾಗೂ ಸರ್ವೆ ಸಂಖ್ಯೆ:104/1ಕ್ಕೆ 19 ಲಕ್ಷಗಳನ್ನು ಮಾತ್ರ ಪರಿಗಣಿಸಿ ಶುಲ್ಕಗಳನ್ನು ಲೆಕ್ಕ ಹಾಕಿ ಪರಿಗಣನೆಗೆ

ತೆಗೆದುಕೊಳ್ಳಬಹುದೆಂದು ತಿಳಿಸಿರುವ ಅಂಶವನ್ನು ಸಭೆಯು ಗಮನಿಸಿ, ಪ್ರಸ್ತಾವನೆ ಸಂಬಂಧ ಅರ್ಜಿದಾರರಿಂದ ಹೆಚ್ಚುವರಿಯಾಗಿ ಪಾವತಿಸಿಕೊಂಡಿರುವ ವ್ಯತ್ಯಾಸದ ಶುಲ್ಕ ರೂ.67,800/-ಗಳನ್ನು ಅರ್ಜಿದಾರರಿಗೆ ಹಿಂದಿರುಗಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

V **<u>ಅಧ್ಯಕ್ಷರ ಅಪ್ಪಣೆ ಮೇರೆಗೆ ಹೆಚ್ಚುವರಿ ವಿಷಯಗಳು</u>**

1) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:810/1ರ 03ಎ–04ಗು ವಿಸ್ತೀರ್ಣದ ಜಮೀನಿಗೆ ಪರಿಷ್ಕೃತ ವಸತಿ ವಿನ್ಯಾಸ ಅನುಮೋದನೆ ಕೋರಿ ಶ್ರೀ ಎಂ.ರಾಜು ಬಿನ್ ಶ್ರೀಮತಿ ಜಯಲಕ್ಷ್ಮಮ್ಮ ಇವರು ಸಲ್ಲಿಸಿರುವ ಮನವಿ ಕುರಿತು.

*****

ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ಎಂ.ರಾಜು ಬಿನ್ ಶ್ರೀಮತಿ ಜಯಲಕ್ಷ್ಮಮ್ಮ ರವರು ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:810/1ರ 03ಎ–04ಗು ವಿಸ್ತೀರ್ಣದ ಜಮೀನಿಗೆ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿ ಈ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ವಿಷಯವನ್ನು ದಿನಾಂಕ:22.12.2017ರಂದು ಜರುಗಿದ ಪ್ರಾಧಿಕಾರದ 58ನೇ ಸಾಮಾನ್ಯ ಸಭೆಯ ಹೆಚ್ಚುವರಿ ವಿಷಯ ಸಂಖ್ಯೆ:13ರಲ್ಲಿ ಚರ್ಚಿಸಲಾಗಿ, ಸಭೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ತಿದ್ದುಪಡಿ ಕಾಯ್ದೆ 2015ರ ಕಲಂ 17(2ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ತೀರ್ಮಾನಿಸಲಾಗಿದೆ. ಸಭೆಯ ನಿರ್ಣಯದನ್ವಯ ಪ್ರಾಧಿಕಾರಕ್ಕೆ ಅಗತ್ಯ ಶುಲ್ಕ ಪಾವತಿಸಿಕೊಂಡು ಅರ್ಜಿದಾರರಿಗೆ ಅನುಮೋದಿತ ನಕ್ಷೆಯಂತೆ ವಿನ್ಯಾಸವನ್ನು ಭೂಮಿಯ ಮೇಲೆ Demarcate ಮಾಡಿ ಸದರಿ ಬಡಾವಣೆಯನ್ನು ಮೂಲಭೂತ ಸೌಕರ್ಯಗಳೊಂದಿಗೆ ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿಪಡಿಸಲು ದಿನಾಂಕ:27.09.2019ರಂದು ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಪ್ರಸ್ತುತ ಅರ್ಜಿದಾರರು ದಿನಾಂಕ:03.09.2020ರಂದು ಮರು ಮನವಿ ಸಲ್ಲಿಸಿ, ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯಲ್ಲಿ 25ಮೀ ಬಫರ್ ಜೋನ್ ಬಿಟ್ಟು ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದ್ದು, ಪ್ರಸ್ತಾಪಿತ ಜಮೀನಿಗೆ ಹೊಂದಿಕೊಂಡಿರುವ ಹಳ್ಳವು 12ಅಡಿ ಇರುವುದಾಗಿ ಸರ್ವೆ ನಕ್ಷೆಯಲ್ಲಿ ನಮೂದಿಸಿ ದಿನಾಂಕ:25.06.2020ರಂದು ತಾಲ್ಲೂಕು ಭೂ ಮಾಪಕರು, ಮದ್ದೂರು ತಾಲ್ಲೂಕು ಹಾಗೂ ತಹಶೀಲ್ದಾರ್, ಮದ್ದೂರು ತಾಲ್ಲೂಕು ರವರು ದೃಢೀಕರಿಸಿ ಸರ್ವೆ ನಕ್ಷೆಯನ್ನು ನೀಡಿರುತ್ತಾರೆ. ಅದರಂತೆ ನಿಯಮಾನುಸಾರ ಬಫರ್ ಜೋನ್ ಕಾಯ್ದಿರಿಸಿ ಪರಿಷ್ಕೃತ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿರುತ್ತಾರೆ.

ಅರ್ಜಿದಾರರು ಮುಖ್ಯಾಧಿಕಾರಿಗಳು, ಪುರಸಭಾ ಕಾರ್ಯಾಲಯ, ಮದ್ದೂರು ರವರ ಪತ್ರ ಸಂಖ್ಯೆ: ಪುಸಮ/ ಕಂ.ಶಾ/ಸಿ.ಆರ್/359/2020–21, ದಿನಾಂಕ:07.10.2020ರ ಪತ್ರವನ್ನು ಸಲ್ಲಿಸಿದ್ದು, ಸದರಿ ಪತ್ರದಲ್ಲಿ ಪುರಸಭೆಯಲ್ಲಿ ಸದರಿ ನಿವೇಶನಗಳನ್ನು ಆಸ್ತಿ ತೆರಿಗೆ ವಹಿಯಲ್ಲಿ ಖಾತಾ ದಾಖಲಾಗಿರುವುದಿಲ್ಲ ಮತ್ತು ವಿನ್ಯಾಸದಲ್ಲಿನ ಸಾರ್ವಜನಿಕ ಪ್ರದೇಶಗಳಾದ ರಸ್ತೆ, ಉದ್ಯಾನವನ ಮತ್ತು ನಾಗರೀಕ ಸೌಲಭ್ಯದ ಪ್ರದೇಶಗಳನ್ನು ಪುರಸಭೆಗೆ ಹಸ್ತಾಂತರ ಮಾಡಿರುವುದಿಲ್ಲ ಎಂದು ದೃಢೀಕರಿಸಿರುತ್ತಾರೆ. ಅರ್ಜಿದಾರರು ಪ್ರಾಧಿಕಾರಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಅನುಮೋದಿತ ನಕ್ಷೆಯಂತೆ ನಿವೇಶನಗಳನ್ನು ಸಾರ್ವಜನಿಕರಿಗಾಗಲೀ ಅಥವಾ ಯಾವುದೇ ಸಂಸ್ಥೆಯಾಗಲೀ ಕ್ರಯ ಮಾಡಿಲ್ಲವೆಂದು ಹಾಗೂ ನಿವೇಶನಗಳನ್ನು ಮಾರಾಟ ಒಪ್ಪಂದ ಮಾಡಿಕೊಂಡಿಲ್ಲವೆಂದು ಹಾಗೂ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ತಂಟೆ ತಕರಾರು / ವ್ಯಾಜ್ಯ / ಸಿವಿಲ್ ಕೇಸ್ ಇಲ್ಲವೆಂದು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅರ್ಜಿದಾರರು ನಮೂನೆ–16 ಅನ್ನು ಸಹ ಸಲ್ಲಿಸಿರುತ್ತಾರೆ.

ಹಾಗಾಗಿ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015ರ ಕಲಂ 17(2ಎ)ರನ್ವಯ ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ತಯಾರಿಸಿರುವ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

<u>ತೀರ್ಮಾನ:</u>

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಿಂದ ದಿನಾಂಕ:27.09.2019ರಂದು ಅನುಮೋದಿಸಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅರ್ಜಿದಾರರು ದಿನಾಂಕ:03.09.2020ರ ಮನವಿಯೊಂದಿಗೆ ಸಲ್ಲಿಸಿರುವ ದಿನಾಂಕ:25.06.2020ರಂದು ತಹಶೀಲ್ದಾರ್, ಮದ್ದೂರು ತಾಲ್ಲೂಕು ರವರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ನಿಯಮಾನುಸಾರ ಬಫರ್ ಕಾಯ್ದಿರಿಸಿ, ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕಸಬಾ ಹೋಬಳಿ, ಮದ್ದೂರು ಗ್ರಾಮದ ಸರ್ವೆ ಸಂಖ್ಯೆ:810/1ರ 03ಎ–04ಗು ವಿಸ್ತೀರ್ಣದ ಜಮೀನಿಗೆ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

2) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹಿರೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:15/2ರ 0ಎ–20ಗು, 15/3ರ 0ಎ–10ಗು, 15/4ರ 0ಎ–20ಗು, 16/2ರ 0ಎ–20ಗು, 16/3ರ 0ಎ–27ಗು, 16/4ರ 0ಎ–07ಗು, 16/5ರ 0ಎ–07ಗು, 16/6ರ 0ಎ–17ಗು ಮತ್ತು ಸರ್ವೆ ಸಂಖ್ಯೆ16/7ರ 0ಎ–07ಗು ಒಟ್ಟು 03ಎ–15ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೈಕೋ ಕಾರ್ಮಿಕರ ಬಳಗದ ವಸತಿ ಸಹಕಾರ ಸಂಘ ನಿಯಮಿತ(ರಿ) ಇವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಹಿರೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:15/2ರ 0ಎ–20ಗು, 15/3ರ 0ಎ–10ಗು, 15/4ರ 0ಎ–20ಗು, 16/2ರ 0ಎ–20ಗು, 16/3ರ 0ಎ–27ಗು, 16/4ರ 0ಎ–07ಗು, 16/5ರ 0ಎ–07ಗು, 16/6ರ 0ಎ–17ಗು ಮತ್ತು ಸರ್ವೆ ಸಂಖ್ಯೆ:16/7ರ 0ಎ–07ಗು ಒಟ್ಟು 03ಎ–15ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 225 ಬೆಮಪ್ರಾ 2009, ಬೆಂಗಳೂರು, ದಿನಾಂಕ:09.10.2009ರಲ್ಲಿ ಪ್ರಸ್ತಾಪಿತ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:177, 180, 181/1,2,3,4, 183, 184, 185, 186, 187, 25ಪಿ2 ಹಾಗೂ ಹಿರೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:15, 16, 18ರಲ್ಲಿನ (ಖರಾಬು ಎ ಯನ್ನು ಒಳಗೊಂಡಂತೆ) 46ಎ–02ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ ಮತ್ತು ಪ್ರಾಧಿಕಾರದ ಪತ್ರ ಸಂಖ್ಯೆ: ಬಿಎಂಐಸಿಎಪಿಎ/ಭೂಉಬ/89/2008–09, ದಿನಾಂಕ:10.08.2012ರಲ್ಲಿ ಭೂ ಉಪಯೋಗ ಬದಲಾವಣೆ ಆದೇಶ ಹೊರಡಿಸಲಾಗಿರುತ್ತದೆ.

ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ಸಂಖ್ಯೆ: LNDC10000448, ದಿನಾಂಕ:04.08.2018ರಲ್ಲಿ ಹಿರೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:15/2ರಲ್ಲಿ 0ಎ–20ಗು, ಸಂಖ್ಯೆ: LNDC10000444, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 15/3ರಲ್ಲಿ 0ಎ–10ಗು, ಸಂಖ್ಯೆ: LNDC10000452, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 15/4ರಲ್ಲಿ 0ಎ–20ಗು, ಸಂಖ್ಯೆ: LNDC10000455, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 16/2ರಲ್ಲಿ 0ಎ–20ಗು, ಸಂಖ್ಯೆ: LNDC10000449, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 16/3ರಲ್ಲಿ 0ಎ–27ಗು, ಸಂಖ್ಯೆ: LNDC10000453, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 16/4ರಲ್ಲಿ 0ಎ–07ಗು, ಸಂಖ್ಯೆ: LNDC10000447, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 16/5ರಲ್ಲಿ 0ಎ–07ಗು, ಸಂಖ್ಯೆ: LNDC10000451,

ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 16/6ರಲ್ಲಿ 0ಎ–17ಗು, ಸಂಖ್ಯೆ: LNDC10000454, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ: 16/7ರಲ್ಲಿ 0ಎ–07ಗು, ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ. ನಂತರ, ದಿನಾಂಕ:24.12.2020ರಂದು ಸದರಿ ಭೂ ಪರಿವರ್ತನಾ ಆದೇಶಗಳನ್ನು ನವೀಕರಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ:ಬಿಎಂಐಸಿಪಿ/ ಎಲ್‌ಎಕ್ಯೂ(2)/ಸಿ.ಆರ್:36/2020–21, ದಿನಾಂಕ:07.12.2020ರಲ್ಲಿ ಹಿರೇಹಳ್ಳಿ ಗ್ರಾಮದ ವಿವಿಧ ಸರ್ವೆ ನಂಬರ್ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಹಾಗೂ ವಿಶೇಷ ಭೂಸ್ವಾಧೀನಾಧೀಕಾರಿಗಳು–1, ಕೆಐಎಡಿಬಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/1354/2020–21, ದಿನಾಂಕ:10.12.2020ರ ಪತ್ರದಲ್ಲಿ ಪ್ರಸ್ತಾಪಿತ ಜಮೀನುಗಳಿಗೆ ಸರ್ಕಾರದಿಂದ ಹೊರಡಿಸಲಾಗಿರುವ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಸಂಖ್ಯೆ:ಸಿಐ 103 ಎಸ್‌ಪಿಕ್ಯೂ 2003, ದಿನಾಂಕ:26.08.2003ರನ್ವಯ ಭೂಸ್ವಾಧೀನಾವಗಿರುವುದು ಕಂಡುಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ(ಬಿ) ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ:ಬ./ಗ್ರಾ/ಪಂ:110/2020–21, ದಿನಾಂಕ:19.10.2020ರಲ್ಲಿ ಪ್ರಸ್ತಾಪಿತ ಜಮೀನಿಗೆ ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:175ರಲ್ಲಿ ಅಭಿವೃದ್ಧಿಪಡಿಸಿರುವ ಬಿ.ಎಂ.ಆರ್.ಡಿ.ಎ ಬಡಾವಣೆಯ ರಸ್ತೆಗಳಿಂದ ಸಂಪರ್ಕವಿದ್ದು ಜೊತೆಗೆ ಬನ್ನಿಕುಪ್ಪೆಯಿಂದ ಹಿರೇಹಳ್ಳಿಗೆ ಸಂಪರ್ಕ ಕಲ್ಪಿಸುವ ಬಂಡಿ ದಾರಿಯಿಂದ ಸಹ ಪ್ರಸ್ತಾಪಿತ ಜಮೀನಿಗೆ ರಸ್ತೆ ಸಂಪರ್ಕವಿರುತ್ತದೆ. ಆದುದರಿಂದ, ಸದರಿ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಿರ್ವಹಿಸಲು ಗ್ರಾಮ ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ದೃಢೀಕರಿಸಿ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ.

ಪ್ರಸ್ತಾಪಿತ ಜಮೀನುಗಳಿಗೆ ಸಂಬಂಧಿಸಿದಂತೆ ದೃಢೀಕೃತ ಜಂಟಿ ಸರ್ವೆ ನಕ್ಷೆಯನ್ನು ಕಳುಹಿಸಿಕೊಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು, ರಾಮನಗರ ರವರಿಗೆ ದಿನಾಂಕ:05.11.2020ರ ಈ ಕಛೇರಿ ಪತ್ರದಲ್ಲಿ ಕೋರಲಾಗಿದ್ದು, ಆದರೆ ಈವರೆವಿಗೂ ಯಾವುದೇ ಮಾಹಿತಿ/ದಾಖಲೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸಂಬಂಧ ಕೆಲವು ಮಾಹಿತಿ/ದಾಖಲೆಗಳನ್ನು ಸಲ್ಲಿಸುವಂತೆ ದಿನಾಂಕ:05.01.2021ರ ಈ ಕಛೇರಿ ಹಿಂಬರಹದಲ್ಲಿ ಅರ್ಜಿದಾರರಿಗೂ ಸಹ ತಿಳಿಸಲಾಗಿದ್ದು, ಅದಕ್ಕನುಗುಣವಾಗಿ ಅರ್ಜಿದಾರರು ದಿನಾಂಕ:05.01.2021ರಲ್ಲಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಮನವಿಯಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸುತ್ತಾ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

1. ಸರ್ವೆ ಸಂಖ್ಯೆ:15/3ರ ಜಮೀನಿಗೆ ಸಂಬಂಧಿಸಿದಂತೆ ಸಂಬಂಧಿಸಿದಂತೆ ಎಂ.ಆರ್ ಗಾಗಿ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿ ಅದನ್ನು ಪಡೆದ ತಕ್ಷಣ ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.
2. ಪ್ರಸಾಪಿತ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿರುವ ರಸೀದಿಗಾಗಿ ಪಂಚಾಯತ್ ನಿಂದ ಪತ್ರ ಪಡೆದು ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.
3. ಸರ್ವೆ ಸಂಖ್ಯೆ:16/2ರ 0ಎ–20ಗು ಜಮೀನಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ಯವರು ಭೂ ಪರಿವರ್ತನಾ ಆದೇಶವನ್ನು ನವೀಕರಿಸಿರುವ ಸಂಬಂಧ ಹೊರಡಿಸಿರುವ ಆದೇಶದ ಪ್ರತಿಯನ್ನು ಈಗಾಗಲೇ ತಮ್ಮ ಸಮಕ್ಷಮಕ್ಕೆ (5/1/2021ರಂದು) ನೀಡಲಾಗಿದೆ.
4. ಪ್ರಸ್ತಾಪಿತ ವಿನ್ಯಾಸಕ್ಕೆ ವಿದ್ಯುತ್ ಸೌಲಭ್ಯ ಒದಗಿಸುವ ಬಗ್ಗೆ ಬೆಸ್ಕಾಂ ನಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಕ್ಕಾಗಿ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿ ಅದನ್ನು ಪಡೆದ ತಕ್ಷಣ ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.

5. ಪ್ರಾಧಿಕಾರದ ವಲಯ ನಿಯಮಾವಳಿಗಳ ಅನ್ವಯ ತಯಾರಿಸಿರುವ ವಿನ್ಯಾಸಕ್ಕೆ ನಕ್ಷೆ ಮತ್ತು ಅದಕ್ಕೆ ಅನುಗುಣವಾಗಿ ತಯಾರಿಸಿರುವ ಯೋಜನಾ ವರದಿಗಾಗಿ ಸಂಬಂಧಪಟ್ಟ ಸರ್ವೆ ಇಲಾಖೆಗೆ ಪತ್ರ ಸಲ್ಲಿಸಿದ್ದು ಅದನ್ನು ಪಡೆದ ತಕ್ಷಣ ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.

ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದಿಂದ ತಾತ್ಕಾಲಿಕ ಅನುಮೋದನೆ ನೀಡಿರುವ ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ಸಂಖ್ಯೆಗಳ ಒಟ್ಟು 59ಎ–30ಗು ಜಮೀನಿನ ವಸತಿ ವಿನ್ಯಾಸದ ರಸ್ತೆಗಳಿಂದ ಮತ್ತು ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:175ರಲ್ಲಿ ಬಿಎಂಆರ್‌ಡಿಎ ಯಿಂದ ಅನುಮೋದನೆ ನೀಡಿ ಅಭಿವೃದ್ಧಿಪಡಿಸಿರುವ ಬಡಾವಣೆ ರಸ್ತೆಗಳಿಂದ ಸಂಪರ್ಕವಿರುತ್ತದೆ. ಆದರೆ ಪ್ರಾಧಿಕಾರದಿಂದ ತಾತ್ಕಾಲಿಕ ಅನುಮೋದನೆ ನೀಡಿರುವ ಸದರಿ ವಸತಿ ವಿನ್ಯಾಸಕ್ಕೆ ಈವರೆವಿಗೂ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ನೀಡಿರುವುದಿಲ್ಲ ಮತ್ತು ಸದರಿ ವಿನ್ಯಾಸದಲ್ಲಿನ ರಸ್ತೆ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವುದಿಲ್ಲ ಹಾಗೂ ಸರ್ವೆ ಸಂಖ್ಯೆ:175ರಲ್ಲಿ ಬಿಎಂಆರ್‌ಡಿಎ ಯಿಂದ ಅನುಮೋದನೆ ನೀಡಿ ಅಭಿವೃದ್ಧಿಪಡಿಸಿರುವ ಬಡಾವಣೆ ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವ ಬಗ್ಗೆ ಯಾವುದೇ ಮಾಹಿತಿ/ ದಾಖಲೆಗಳನ್ನು ಅರ್ಜಿದಾರರು ಸಲ್ಲಿಸಿರುವುದಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸುತ್ತಾ, ಅರ್ಜಿದಾರರು ಕೋರಿರುವಂತೆ ಪ್ರಸ್ತಾಪಿತ ಜಮೀನುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 225 ಮೈಅಪ್ರಾ 2009, ಬೆಂಗಳೂರು, ದಿನಾಂಕ:09.10.2009ರಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಿರುವುದನ್ನು ಹಾಗೂ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ವಿವಿಧ ಅಧಿಕೃತ ಜ್ಞಾಪನ ಪತ್ರಗಳಲ್ಲಿ ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿದ್ದು, ನಂತರ ದಿನಾಂಕ:24.12.2020ರಂದು ಸದರಿ ಭೂ ಪರಿವರ್ತನಾ ಆದೇಶಗಳನ್ನು ನವೀಕರಿಸಿರುವುದನ್ನು ಸಭೆಯು ಗಮನಿಸಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ(ಬಿ) ಗ್ರಾಮ ಪಂಚಾಯಿತಿ ರವರು ದಿನಾಂಕ:19.10.2020ರ ಪತ್ರದಲ್ಲಿ ಪ್ರಸ್ತಾಪಿತ ಜಮೀನಿಗೆ ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 59ಎ–30ಗು ಜಮೀನಿನಲ್ಲಿ ಮೈಕೋ ಸಂಘದಿಂದ ಈಗಾಗಲೇ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಯಿಂದ 10ಮೀಟರ್ ರಸ್ತೆ ಸಂಪರ್ಕವಿರುವುದಾಗಿ ಹಾಗೂ ಸದರಿ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಿರ್ವಹಿಸಲು ಗ್ರಾಮ ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ದೃಢೀಕರಿಸಿರುವುದರಿಂದ ಹಾಗೂ ಪ್ರಸ್ತಾಪಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರು ನಿರಾಕ್ಷೇಪಣಾ ಪತ್ರಗಳನ್ನು ನೀಡಿರುವುದರಿಂದ, ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಂತೆ ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ಸಂಖ್ಯೆಗಳ ಒಟ್ಟು 59ಎ–30ಗು ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಯಲ್ಲಿನ ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಹಾಗೂ ಪ್ರಸ್ತಾಪಿತ ಜಮೀನಿಗೆ ಹೊಂದಿಕೊಂಡಂತೆ ಬಿಎಂಆರ್‌ಡಿಎ ಯಿಂದ ಅನುಮೋದನೆ ನೀಡಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿನ ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವ ಬಗ್ಗೆ ದಾಖಲೆ, ಬೆಸ್ಕಾಂ ರವರಿಂದ ನಿರಾಕ್ಷೇಪಣಾ ಪತ್ರವನ್ನು ಒಳಗೊಂಡಂತೆ ಅವಶ್ಯ ದಾಖಲೆಗಳನ್ನು ಮತ್ತು ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು, ರಾಮನಗರ ರವರಿಂದ ದೃಢೀಕೃತ ಜಂಟಿ ಸರ್ವೆ ನಕ್ಷೆಯನ್ನು ಪಡೆದು ಅದಕ್ಕನುಗುಣವಾಗಿ ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ವಸತಿ ವಿನ್ಯಾಸ ನಕ್ಷೆಯಲ್ಲಿನ ಭೂ ಉಪಯೋಗ ವಿಶ್ಲೇಷಣೆಗಳನ್ನು

ಪರಿಶೀಲಿಸಿಕೊಂಡ ನಂತರ ಪ್ರಸ್ತಾಪಿತ ಜಮೀನಿಗೆ ವಸತಿ ವಿನ್ಯಾಸ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

3) **ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 177/2ರ 0ಎ–20ಗು, 177/4ರ 01ಎಕರೆ, 177/5ರ 01ಎಕರೆ, 178/2ರ 01ಎ–26ಗು, 181/1ರ 01ಎ–21ಗು, 181/2ರ 0ಎ–30ಗು ಒಟ್ಟು 06ಎ–17ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಮೈಕೋ ಕಾರ್ಮಿಕರ ಬಳಗದ ವಸತಿ ಸಹಕಾರ ಸಂಘ ನಿಯಮಿತ(ರಿ) ಇವರು ಸಲ್ಲಿಸಿರುವ ಮನವಿ ಕುರಿತು.**

******

ವಿಷಯಕ್ಕೆ ಸಂಬಂಧಿಸಿದಂತೆ, ಅರ್ಜಿದಾರರು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 177/2ರ 0ಎ–20ಗು, 177/4ರ 01ಎಕರೆ, 177/5ರ 01ಎಕರೆ, 178/2ರ 01ಎ–26ಗು, 181/1ರ 01ಎ–21ಗು, 181/2ರ 0ಎ–30ಗು ಒಟ್ಟು 06ಎ–17ಗು ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಅಗತ್ಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸರ್ಕಾರದಿಂದ ಅನುಮೋದನೆಯಾದ ಬಿಎಂಐಸಿಎಪಿಎ ಮಹಾಯೋಜನೆಯಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯವೆಂದು ವರ್ಗೀಕರಿಸಿರುವ ಭೂ ಉಪಯೋಗದಲ್ಲಿ ಕಾಯ್ದಿರಿಸಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 225 ಬೆಂರೂಪ್ರಾ 2009, ಬೆಂಗಳೂರು, ದಿನಾಂಕ:09.10.2009 ರಲ್ಲಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:177, 180, 181/1,2,3,4, 183, 184, 185, 186, 187, 25ಪಿ2 ಮತ್ತು ಹಿರೇಹಳ್ಳಿ ಗ್ರಾಮದ ಸರ್ವೆ ಸಂಖ್ಯೆ:15, 16, 18ರಲ್ಲಿನ (ಖರಾಬು ಎ ಯನ್ನು ಒಳಗೊಂಡಂತೆ) 46ಎ–02ಗು ವಿಸ್ತೀರ್ಣದ ಜಮೀನನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ನಅಇ 422 ಮೈಅಪ್ರಾ 2015, ಬೆಂಗಳೂರು, ದಿನಾಂಕ:03.09.2015ರಲ್ಲಿ ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ:178/2ರ 01ಎ–26ಗು ಒಳಗೊಂಡಂತೆ ಒಟ್ಟು 45ಎ–09ಗು ವಿಸ್ತೀರ್ಣದ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. ಅದರಂತೆ, ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಐಸಿಎಪಿಎ/ಭೂಉಬ/89/2008–09, ದಿನಾಂಕ:10.08.2012 ಮತ್ತು ಸಂಖ್ಯೆ:ಬಿಎಂಐಸಿಎಪಿಎ/ಭೂಉಬ/83/2014–15, ದಿನಾಂಕ:16.09.2015ರಲ್ಲಿ ಭೂ ಉಪಯೋಗ ಬದಲಾವಣೆ ಆದೇಶ ಹೊರಡಿಸಲಾಗಿರುತ್ತದೆ.

ಪ್ರಸ್ತಾಪಿತ ಜಮೀನನ್ನು ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ಸಂಖ್ಯೆ: LNDC10000457, ದಿನಾಂಕ:04.08.2018ರಲ್ಲಿ ಬನ್ನಿಕುಪ್ಪೆ ಗ್ರಾಮದ ಸರ್ವೆ ಸಂಖ್ಯೆ: 177/2ರಲ್ಲಿ 0ಎ–20ಗು, ಸಂಖ್ಯೆ: LNDC10001142, ದಿನಾಂಕ:10.10.2018ರಲ್ಲಿ ಸರ್ವೆ ಸಂಖ್ಯೆ:177/4ರ 01ಎಕರೆ, ಸಂಖ್ಯೆ: LNDC10000456, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ:177/5ರ 01ಎಕರೆ, ಸಂಖ್ಯೆ: 139736, ದಿನಾಂಕ:18.02.2020ರಲ್ಲಿ 178/2ರ 01ಎ–26ಗು, ಸಂಖ್ಯೆ: LNDC10000458, ದಿನಾಂಕ:04.08.2018ರಲ್ಲಿ ಸರ್ವೆ ಸಂಖ್ಯೆ:181/1ರ 01ಎ–21ಗು ಮತ್ತು ಸರ್ವೆ ಸಂಖ್ಯೆ:181/2ರ 0ಎ–30ಗು ವಿಸ್ತೀರ್ಣದ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿರುತ್ತಾರೆ. ನಂತರ, ದಿನಾಂಕ:24.12.2020ರಂದು ಸದರಿ ಭೂ ಪರಿವರ್ತನಾ ಆದೇಶಗಳನ್ನು ನವೀಕರಿಸಿರುತ್ತಾರೆ.

ವಿಶೇಷ ಭೂಸ್ವಾಧೀನಾಧೀಕಾರಿಗಳು–2, ಕೆ.ಐ.ಎ.ಡಿ.ಬಿ(ಬಿಎಂಐಸಿಪಿ), ಬೆಂಗಳೂರು ರವರ ಪತ್ರ ಸಂಖ್ಯೆ:ಬಿಎಂಐಸಿಪಿ/ ಎಲ್ಎಕ್ಯೂ(2)/ಸಿ.ಆರ್:37/2020–21, ದಿನಾಂಕ:07.12.2020ರಲ್ಲಿ ಬನ್ನಿಕುಪ್ಪೆ ಗ್ರಾಮದ ವಿವಿಧ

ಸರ್ವೆ ನಂಬರ್ ಜಮೀನುಗಳಿಗೆ ಅಧಿಸೂಚನೆ ಸಂಖ್ಯೆ:ಸಿಐ/196/ಎಸ್‌ಪಿಕ್ಯೂ/98, ದಿನಾಂಕ:21.07.1999ರಂದು ಕೆಐಎಡಿ ಕಾಯ್ದೆ ಕಲಂ 28(1)ರಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿರುತ್ತದೆ, ಆದರೆ ಈ ತಹಲ್‌ವರೆವಿಗೂ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. ಆದರೆ ಪ್ರಸ್ತಾಪಿತ ಜಮೀನುಗಳಿಗೆ ಈ ತಹಲ್‌ವರೆವಿಗೂ ಅಧಿಸೂಚನೆ ಹೊರಡಿಸಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ ಹಾಗೂ ವಿಶೇಷ ಭೂಸ್ವಾಧೀನಾಧೀಕಾರಿಗಳು-1, ಕೆಐಎಡಿಬಿ, ಬೆಂಗಳೂರು ಇವರ ಪತ್ರ ಸಂಖ್ಯೆ: ಕೆಐಎಡಿಬಿ/ಎಲ್‌ಎಕ್ಯೂ/1353/2020-21, ದಿನಾಂಕ:10.12.2020ರ ಪತ್ರದಲ್ಲಿ ಪ್ರಸ್ತಾಪಿತ ಜಮೀನುಗಳಿಗೆ ಸರ್ಕಾರದಿಂದ ಹೊರಡಿಸಲಾಗಿರುವ ಕೆಐಎಡಿ ಕಾಯ್ದೆ ಕಲಂ 28(4)ರ ಅಂತಿಮ ಅಧಿಸೂಚನೆ ಸಂಖ್ಯೆ:ಸಿಐ 103 ಎಸ್‌ಪಿಕ್ಯೂ 2003, ದಿನಾಂಕ:26.08.2003ರನ್ವಯ ಭೂಸ್ವಾಧೀನಾವಗಿರುವುದು ಕಂಡುಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ(ಬಿ) ಗ್ರಾಮ ಪಂಚಾಯಿತಿ ರವರ ಪತ್ರ ಸಂಖ್ಯೆ: ಬ./ ಗ್ರಾ/ ಪಂ:111/ 2020-21, ದಿನಾಂಕ:19.10.2020ರಲ್ಲಿ ಪ್ರಸ್ತಾಪಿತ ಜಮೀನಿಗೆ ಹೊಂದಿಕೊಂಡಂತೆ, ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 59ಎ-30ಗು ಜಮೀನಿನಲ್ಲಿ ಈಗಾಗಲೇ ಅಭಿವೃದ್ಧಿ ಮಾಡುತ್ತಿರುವ ಮೈಕೋ ಬಡಾವಣೆಯಿಂದ 10ಮೀಟರ್ ರಸ್ತೆ ಸಂಪರ್ಕವಿದ್ದು ಹಾಗೂ ಸದರಿ ಸಂಪರ್ಕ ರಸ್ತೆಯೂ ಸಾರ್ವಜನಿಕ ರಸ್ತೆಯಾಗಿರುತ್ತದೆ ಮತ್ತು ಸದರಿ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಿರ್ವಹಿಸಲು ಗ್ರಾಮ ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ದೃಢೀಕರಿಸಿ ನಿರಾಕ್ಷೇಪಣಾ ಪತ್ರ ನೀಡಿರುತ್ತಾರೆ.

ಪ್ರಸ್ತಾಪಿತ ಜಮೀನುಗಳಿಗೆ ಸಂಬಂಧಿಸಿದಂತೆ ದೃಢೀಕೃತ ಜಂಟಿ ಸರ್ವೆ ನಕ್ಷೆಯನ್ನು ಕಳುಹಿಸಿಕೊಡುವಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು, ರಾಮನಗರ ರವರಿಗೆ ದಿನಾಂಕ:05.11.2020ರ ಈ ಕಛೇರಿ ಪತ್ರದಲ್ಲಿ ಕೋರಲಾಗಿದ್ದು, ಆದರೆ ಈವರೆವಿಗೂ ಯಾವುದೇ ಮಾಹಿತಿ/ದಾಖಲೆಗಳು ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ. ಪ್ರಸ್ತಾವನೆ ಸಂಬಂಧ ಕೆಲವು ಮಾಹಿತಿ/ದಾಖಲೆಗಳನ್ನು ಸಲ್ಲಿಸುವಂತೆ ದಿನಾಂಕ:05.01.2021ರ ಈ ಕಛೇರಿ ಹಿಂಬರಹದಲ್ಲಿ ಅರ್ಜಿದಾರರಿಗೂ ಸಹ ತಿಳಿಸಲಾಗಿದ್ದು, ಅದಕ್ಕನುಗುಣವಾಗಿ ಅರ್ಜಿದಾರರು ದಿನಾಂಕ:05.01.2021ರಲ್ಲಿ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ ಮನವಿಯಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸುತ್ತಾ, ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

1. ಸರ್ವೆ ಸಂಖ್ಯೆ:177/5ರ ಜಮೀನಿಗೆ ಸಂಬಂಧಿಸಿದಂತೆ ಸಂಬಂಧಿಸಿದಂತೆ ಆರ್.ಟಿ.ಸಿ ಪ್ರಕಾರ ಎಂ.ಆರ್ ಬರುವುದಿಲ್ಲ. ಅದಕ್ಕಾಗಿ ಹಿಂಬರಹವನ್ನು ನೀಡಲಾಗಿದೆ.
2. ಸರ್ವೆ ಸಂಖ್ಯೆ:181/1ರ 01ಎ-21ಗು ಜಮೀನಿಗೆ ಸಂಬಂಧಿಸಿದಂತೆ ಇತ್ತೀಚಿನ ಇ.ಸಿ ನೀಡಲಾಗಿದೆ. ಸರ್ವೆ ಸಂಖ್ಯೆ:178/2ರ 01ಎ-26ಗು ಗಾಗಿ ಅರ್ಜಿ ಸಲ್ಲಿಸಿದ್ದು, ಪಡೆದ ತಕ್ಷಣ ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.
3. ಪ್ರಸಾಪಿತ ಜಮೀನುಗಳಿಗೆ ಸಂಬಂಧಿಸಿದಂತೆ ಕಂದಾಯ ಪಾವತಿಸಿರುವ ರಸೀದಿಗಾಗಿ ಪಂಚಾಯತ್ ನಿಂದ ಪತ್ರ ಪಡೆದು ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.
4. ಪ್ರಸ್ತಾಪಿತ ವಿನ್ಯಾಸಕ್ಕೆ ವಿದ್ಯುತ್ ಸೌಲಭ್ಯ ಒದಗಿಸುವ ಬಗ್ಗೆ ಬೆಸ್ಕಾಂ ನಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಕ್ಕಾಗಿ ಈಗಾಗಲೇ ಅರ್ಜಿ ಸಲ್ಲಿಸಿದ್ದು, ಮುಂದಿನ ದಿನಗಳಲ್ಲಿ ಅದನ್ನು ಪಡೆದ ತಕ್ಷಣ ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.
5. ಪ್ರಾಧಿಕಾರದ ವಲಯ ನಿಯಮಾವಳಿಗಳ ಅನ್ವಯ ತಯಾರಿಸಿರುವ ವಿನ್ಯಾಸಕ್ಕೆ ನಕ್ಷೆ ಮತ್ತು ಅದಕ್ಕೆ ಅನುಗುಣವಾಗಿ ತಯಾರಿಸಿರುವ ಯೋಜನಾ ವರದಿಗಾಗಿ ಸಂಬಂಧಪಟ್ಟ ಸರ್ವೆ ಇಲಾಖೆಗೆ ಪತ್ರ ಸಲ್ಲಿಸಿದ್ದು ಅದನ್ನು ಪಡೆದ ತಕ್ಷಣ ತಮ್ಮ ಸಮಕ್ಷಮಕ್ಕೆ ನೀಡಲಾಗುತ್ತದೆ.

ಪ್ರಸ್ತಾಪಿತ ಜಮೀನಿಗೆ ಪ್ರಾಧಿಕಾರದಿಂದ ತಾತ್ಕಾಲಿಕ ಅನುಮೋದನೆ ನೀಡಿರುವ ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ಸಂಖ್ಯೆಗಳ ಒಟ್ಟು 59ಎ-30ಗು ಜಮೀನಿನ ವಸತಿ ವಿನ್ಯಾಸದಿಂದ ರಸ್ತೆ ಸಂಪರ್ಕವಿದ್ದು, ಆದರೆ ಸದರಿ ವಸತಿ

ವಿನ್ಯಾಸಕ್ಕೆ ಈವರೆವಿಗೂ ಪ್ರಾಧಿಕಾರದಿಂದ ಅಂತಿಮ ಅನುಮೋದನೆ ನೀಡಿರುವುದಿಲ್ಲ. ಸದರಿ ವಿನ್ಯಾಸದಲ್ಲಿನ ರಸ್ತೆ ಪ್ರದೇಶಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿರುವುದಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಸಭೆಯ ಅವಗಾಹನೆಗೆ ಸಲ್ಲಿಸುತ್ತಾ, ಅರ್ಜಿದಾರರು ಕೋರಿರುವಂತೆ ಪ್ರಸ್ತಾಪಿತ ಜಮೀನುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2ಎ) ರನ್ವಯ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

ತೀರ್ಮಾನ:

ವಿಷಯದ ಕುರಿತು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಪ್ರಸ್ತಾಪಿತ ಜಮೀನನ್ನು ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ 225 ಮೈಅಪ್ರಾ 2009, ಬೆಂಗಳೂರು, ದಿನಾಂಕ:09.10.2009ರಲ್ಲಿ ಪ್ರಸ್ತಾಪಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಿ ಆದೇಶ ಹೊರಡಿಸಿರುವುದನ್ನು ಹಾಗೂ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ ರವರು ವಿವಿಧ ಅಧಿಕೃತ ಜ್ಞಾಪನ ಪತ್ರಗಳಲ್ಲಿ ಸದರಿ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಮಾಡಿ ಆದೇಶ ಹೊರಡಿಸಿದ್ದು, ನಂತರ ದಿನಾಂಕ:24.12.2020ರಂದು ಸದರಿ ಭೂ ಪರಿವರ್ತನಾ ಆದೇಶಗಳನ್ನು ನವೀಕರಿಸಿರುವುದನ್ನು ಸಭೆಯು ಗಮನಿಸಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಬನ್ನಿಕುಪ್ಪೆ(ಬಿ) ಗ್ರಾಮ ಪಂಚಾಯಿತಿ ರವರು ದಿನಾಂಕ:19.10.2020ರ ಪತ್ರದಲ್ಲಿ ಪ್ರಸ್ತಾಪಿತ ಜಮೀನಿಗೆ ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 59ಎ–30ಗು ಜಮೀನಿನಲ್ಲಿ ಮೈಕೋ ಸಂಘದಿಂದ ಈಗಾಗಲೇ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಯಿಂದ 10ಮೀಟರ್ ರಸ್ತೆ ಸಂಪರ್ಕವಿರುವುದಾಗಿ ಹಾಗೂ ಸದರಿ ಪ್ರದೇಶಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಿರ್ವಹಿಸಲು ಗ್ರಾಮ ಪಂಚಾಯಿತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ದೃಢೀಕರಿಸಿರುವುದರಿಂದ ಹಾಗೂ ಪ್ರಸ್ತಾಪಿತ ಜಮೀನುಗಳು ಭೂಸ್ವಾಧೀನಕ್ಕೆ ಒಳಪಟ್ಟಿಲ್ಲವೆಂದು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ರವರು ನಿರಾಕ್ಷೇಪಣಾ ಪತ್ರಗಳನ್ನು ನೀಡಿರುವುದರಿಂದ, ಪ್ರಸ್ತಾಪಿತ ಜಮೀನುಗಳಿಗೆ ಹೊಂದಿಕೊಂಡಂತೆ ಬನ್ನಿಕುಪ್ಪೆ ಗ್ರಾಮದ ವಿವಿಧ ಸರ್ವೆ ಸಂಖ್ಯೆಗಳ ಒಟ್ಟು 59ಎ–30ಗು ವಿಸ್ತೀರ್ಣದಲ್ಲಿ ಅಭಿವೃದ್ಧಿಪಡಿಸುತ್ತಿರುವ ಬಡಾವಣೆಯಲ್ಲಿನ ರಸ್ತೆಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಹಾಗೂ ಪ್ರಸ್ತಾವನೆ ಕುರಿತು ಬೆಸ್ಕಾಂ ರವರಿಂದ ನಿರಾಕ್ಷೇಪಣಾ ಪತ್ರವನ್ನು ಒಳಗೊಂಡಂತೆ ಅವಶ್ಯ ದಾಖಲೆಗಳನ್ನು ಮತ್ತು ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ರಾಮನಗರ ತಾಲ್ಲೂಕು, ರಾಮನಗರ ರವರಿಂದ ದೃಢೀಕೃತ ಜಂಟಿ ಸರ್ವೆ ನಕ್ಷೆಯನ್ನು ಪಡೆದು ಅದಕ್ಕನುಗುಣವಾಗಿ ಪ್ರಾಧಿಕಾರದ ವಲಯ ನಿಯಮಾವಳಿಗಳನ್ವಯ ವಸತಿ ವಿನ್ಯಾಸ ನಕ್ಷೆಯಲ್ಲಿನ ಭೂ ಉಪಯೋಗ ವಿಶ್ಲೇಷಣೆಗಳನ್ನು ಪರಿಶೀಲಿಸಿಕೊಂಡ ನಂತರ ಪ್ರಸ್ತಾಪಿತ ಜಮೀನಿಗೆ ವಸತಿ ವಿನ್ಯಾಸ ನಕ್ಷೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ಕಲಂ 17(2–ಎ)ರಂತೆ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ಪ್ರಾಧಿಕಾರದ ಮಹಾಯೋಜನೆಯನ್ನು ಪರಿಷ್ಕರಿಸುವ ಕುರಿತು.

******

ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:12.02.2004ರಂದು ಸರ್ಕಾರದಿಂದ ಅಂತಿಮ ಅನುಮೋದನೆಯಾಗಿರುವ ಪ್ರಾಧಿಕಾರದ ಮಹಾಯೋಜನೆ ಕುರಿತು ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರು

ಮಾತನಾಡಿ ಸಭೆಯಲ್ಲಿ ಹಾಜರಿದ್ದ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ನೈಸ್ ರಸ್ತೆಯ ಅಲೈನ್‌ಮೆಂಟ್ ಒದಗಿಸಲು ತಿಳಿಸಿದರು. ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮಾತನಾಡಿ ಈ ಕುರಿತು ಸದನ ಉಪ ಸಮಿತಿ ಹಂತದಲ್ಲಿ ಸಭೆಯು ನಡೆಯುತ್ತಿದ್ದು, ಸದನ ಉಪ ಸಮಿತಿಯ ಆದೇಶದಂತೆ ಮುಂದಿನ ಕ್ರಮವಹಿಸಬಹುದಾಗಿರುತ್ತದೆ ಎಂದು ಹಾಗೂ ಲೋಕೋಪಯೋಗಿ ಇಲಾಖೆ, ಕೆ.ಐ.ಎ.ಡಿ.ಬಿ ರವರನ್ನು ಒಳಗೊಂಡಂತೆ ಜಂಟಿ ಸಭೆ ಆಯೋಜಿಸಲು ಸಹ ತಿಳಿಸಿದರು. ಆದ್ದರಿಂದ, ಮಾನ್ಯ ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ ರವರ ಅಧ್ಯಕ್ಷತೆಯಲ್ಲಿ ಸಮನ್ವಯ ಅಧಿಕಾರಿಗಳು, ಬಿಎಂಐಸಿಪಿ, ಲೋಕೋಪಯೋಗಿ ಇಲಾಖೆ ಮತ್ತು ವಿಶೇಷ ಭೂಸ್ವಾಧೀನಾಧಿಕಾರಿಗಳು ಕೆ.ಐ.ಎ.ಡಿ.ಬಿ (ಬಿಎಂಐಸಿಪಿ) ರವರನ್ನು ಒಳಗೊಂಡಂತೆ ಸಭೆ ನಡೆಸಿ, ಮಹಾಯೋಜನೆ ಪರಿಷ್ಕರಣೆ ಕುರಿತು ಮುಂದಿನ ಕ್ರಮವಹಿಸುವ ಸಂಬಂಧ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

01/2021

ಸದಸ್ಯ–ಕಾರ್ಯದರ್ಶಿಗಳು,
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

ಅಧ್ಯಕ್ಷರು, ಬಿ.ಎಂ.ಐ.ಸಿ.ಎ.ಪಿ.ಎ.,
ಬೆಂಗಳೂರು